بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 25

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22 ಜೂನ್ 2023, 22 ಎಹ್ಸಾನ್ 1402 ಹಿಜರಿ ಶಮ್‌ಸಿ,
03 ಝಿಲ್‌ಹಜ್ಜ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْٓا اِنْ تَتَّقُوا اللّٰهَ يَجْعَلْ
لَّكُمْ فُرْقَانًا وَّيُكَفِّرْ عَنْكُمْ سَيِّاٰتِكُمْ
وَيَغْفِرْ لَكُمْ ۚ وَاللّٰهُ ذُو الْفَضْلِ الْعَظِيْمِ

**(ಅಲ್-ಅನ್‌ಫಾಲ್: 30)**

**ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಲ್ಲಿ ಭಯಭಕ್ತಿ ಇರಿಸಿಕೊಂಡರೆ, ಅವನು ನಿಮಗೆ ವೈಶಿಷ್ಟ್ಯ ಪೂರ್ಣ ವಿವೇಚನೆಯನ್ನು ನೀಡಿ ನಿಮ್ಮ ದೌರ್ಬಲ್ಯಗಳನ್ನು ಹೋಗಲಾಡಿಸಿ ನಿಮಗೆ ಕ್ಷಮೆ ನೀಡುವನು. ಅಲ್ಲಾಹನು ಮಹತ್ವಪೂರ್ಣ ಅನುಗ್ರಹಗಳ ಒಡೆಯನಾಗಿದ್ದಾನೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### <u>ಯಾವುದೆ ವಸ್ತು ರಸ್ತೆಯಲ್ಲಿ ಬಿದ್ದದು ಕಂಡುಬಂದರೆ</u>

**(2372)** ಹಝ್‌ರತ್ ರೊಲ್ಯದ್ ಬಿನ್ ಖಾಲಿದ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ರಸೂಲುಲ್ಲಾಹ್ (ಸ) ರ ಬಳಿ ವ್ಯಕ್ತಿಯೊಬ್ಬನು ಬಂದನು. ಅವನು ಪೈಗಂಬರ್ (ಸ) ರೊಡನೆ ರಸ್ತೆಯಲ್ಲಿ ಬಿದ್ದ ವಸ್ತುಗಳ ಬಗ್ಗೆ ಪ್ರಸ್ತಾಪಿಸಿದನು. ಅವರು (ಸ) ನುಡಿದರು. ಆ ವಸ್ತು ಮತ್ತು ಅದರ ಗುರುತು ನೆನಪಿನಲ್ಲಿಡಿ. ಒಂದು ವರ್ಷದವರೆಗೆ ಅದರ ಕುರಿತು ಘೋಷಣೆ ಮಾಡುತ್ತಿರಿ. ಅದರ ಮಾಲೀಕನು ಬಂದರೆ ಒಳ್ಳೆಯದು. ಇಲ್ಲದಿದ್ದರೆ, ತಾವು ಬಯಸಿದಂತೆ ಉಪಯೋಗಿಸಿಕೊಳ್ಳಬಹುದು. ಅವರು ಹೇಳಿದರು. ರಸ್ತೆ ತಪ್ಪಿ ಬಂದ ಕುರಿಯ ಬಗ್ಗೆ ತಮ್ಮ (ಸ) ರ ಅಭಿಪ್ರಾಯವೇನು? ಹುಝೂರ್(ಸ) ನುಡಿದರು. ಅದು ನಿಮಗಾಗಿ ಅಥವಾ ನಿಮ್ಮ ಸಹೋದರನಿಗಾಗಿ ಅಥವಾ ಯಾವುದೇ ಕ್ರೂರ ಪ್ರಾಣಿಗಾಗಿ. ಅವನು ಕೇಳಿದನು. ದಾರಿ ತಪ್ಪಿ ಬಂದ ಒಂಟೆ ಇದ್ದರೆ? ಅವರು(ಸ) ಹೇಳಿದರು. ಅದರಿಂದ ನಿನಗೆ ಏನು ಬೇಕಾಗಿದೆ! ಅದರ ಜೊತೆ ಅದರ ನೀರ ಕುಡಿಕೆ ಇದೆ ಮತ್ತು ಅದರ ಕಾಲುಗಳು ಸಹ. ನೀರು ಕುಡಿಯುತ್ತದೆ, ಮರಗಳ ಎಲೆಗಳನ್ನು ತಿನ್ನುತ್ತದೆ, ಅಷ್ಟರಲ್ಲಿ ಅದರ ಮಾಲೀಕನು ಬಂದು ಅದನ್ನು ಪಡೆಯಬಹುದು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಮಸಾಖಾತ್, ಮುದ್ರಣ 2008 ಖಾದಿಯಾನ್)**

ಮರಣಹೊಂದಿದವರೊಂದಿಗೆ ಸಹಾಯ ಬೇಡುವ ವಿಧಾನವನ್ನು ನಾವು ಅತ್ಯಂತ ಕೆಟ್ಟದೃಷ್ಟಿಯಿಂದ ನೋಡುತ್ತೇವೆ.
ಅಲ್ಲಾಹನು ಎಲ್ಲಿಯೂ ಸಹ ಸತ್ತವರ ಬಳಿ ಹೋಗಲು ನಿರ್ದೇಶಿಸಿಲ್ಲ. ಬದಲು **"ಕೂನೂ ಮಾಅಸ್ಸಾದಿಖೀನ್"** ಎಂದು ಆದೇಶವನ್ನು ನೀಡಿ ಜೀವಂತರ ಸಹವಾಸದಲ್ಲಿರಲು ಆದೇಶಿಸಿದ್ದಾನೆ.
ನಾವು ಸತ್ಯವಾಗಿ ಹೇಳುತ್ತೇನೆ. ಮನುಷ್ಯನ ವಿಶ್ವಾಸವುಳ್ಳ ಸಹವಾಸ ಮಾಡದಿದ್ದರೆ, ಅವರ ವಿಶ್ವಾಸ ಸರಿಯಾಗಿರುವುದಿಲ್ಲ.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸಜ್ಜನರ ಸಹವಾಸದ ಉದ್ದೇಶ

ವಿಷಯವೇನೆಂದರೆ ನಾವು ಸತ್ತವರೊಡನೆ ಬೇಡುವ ವಿಧಾನವನ್ನು ಅತ್ಯಂತ ನಿಕೃಷ್ಟತೆಯಿಂದ ನೋಡುತ್ತೇವೆ. ಇದು ದುರ್ಬಲ ವಿಶ್ವಾಸವುಳ್ಳವರ ಕಾರ್ಯವಾಗಿದೆ. ಅವರು ಸತ್ತವರೊಡನೆ ಸಂಪರ್ಕ ಮಾಡುತ್ತಾರೆ. ಮತ್ತು ಜೀವಂತರಿಂದ ದೂರವಿರುತ್ತಾರೆ. ಅಲ್ಲಾಹನು ಹೇಳಿದನು. ಹಝ್‌ರತ್ ಯೂಸೂಫ್(ಅ) ರವರ ಜೀವಂತ ಕಾಲದಲ್ಲಿ ಜನರು ಅವರ ನುಬುವ್ವತ್ತನ್ನು ತಿರಸ್ಕರಿಸಿದರು. ಅವರು ತೀರಿ ಹೋದ ದಿವಸದಿಂದ ನುಬವ್ವತ್ ಕೊನೆಗೊಂಡಿದೆ ಎಂದು ಹೇಳಿದರು. ಅಲ್ಲಾಹನು ಎಲ್ಲಿಯೂ ಸಹ ಸತ್ತವರ ಬಳಿ ಹೋಗಲು ಆದೇಶ ನೀಡಲಿಲ್ಲ. ಬದಲು "ಕೂನೂ ಮಸ್ಸಾದಿಖೀನ್ (ಅತ್ತಾಬ-19) ರ ಆದೇಶ ನೀಡಿ ಜೀವಂತರ ಸಹವಾಸದಲ್ಲಿರಲು ಆದೇಶ ನೀಡಿದ್ದಾನೆ. ಅದೇ ಕಾರಣದಿಂದ ನಾವು ನಮ್ಮ ಮಿತ್ರರಿಗೆ ಇಲ್ಲಿಗೆ ಬರಲು ಮತ್ತು ವಾಸಿಸಲು ತಾಕೀತು ಮಾಡುತ್ತಿರುತ್ತೇವೆ. ಯಾರಿಗೆಲ್ಲ ನಾವು ಇಲ್ಲಿ ಇರಲು ಹೇಳುತ್ತೇವೋ ಅಲ್ಲಾಹನು ಬಲ್ಲವನಾಗಿದ್ದಾನೆ. ಅದರ ಉದ್ದೇಶ ಅವರ ಮೇಲೆ ಕೃಪೆತೋರಿ ಅವರ ಹಿತವನ್ನೇ ಬಯಸಿಯಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ. ಮನುಷ್ಯ ಸತ್ಯವಿಶ್ವಾಸಿಗರ ಸಹವಾಸ ಮಾಡದಿದ್ದರೆ, ಅವರ ವಿಶ್ವಾಸ ಸರಿಯಾಗಿರುವುದಿಲ್ಲ. ಏಕೆಂದರೆ ಸ್ವಭಾವಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ. ಒಂದೇ ಸಮಯದಲ್ಲಿ ಎಲ್ಲರ ಸ್ವಭಾವಕ್ಕೆ ತಕ್ಕಂತೆ ಉಪದೇಶ ಮಾಡಲಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವರ ಅನಿಸಿಕೆ ಸ್ವಭಾವಕ್ಕನುಗುಣವಾಗಿ ಮಾತುಗಳು ಹೊರಡುತ್ತವೆ. ಅದರಿಂದ ಅವರಿಗೆ ಪ್ರಯೋಜನವಾಗುತ್ತದೆ. ಯಾರಾದರೂ ಮನುಷ್ಯರೊಬ್ಬರು ಪದೇ ಪದೇ ಬರಲಿಲ್ಲ ಎಂದಾದರೆ, ಒಂದು ಸಂದರ್ಭದಲ್ಲಿ ಅವನ ಸ್ವಭಾವಕ್ಕನುಗುಣವಾಗಿ ಮಾತುಗಳು ಆಗಲಿಲ್ಲ ಎಂದಾದರೆ, ಅವನು ಒಳ್ಳೆಯ ಮಾರ್ಗದಿಂದ ದೂರವಾಗುವ ದಾರಿತಪ್ಪುವ ಸಂಭವವಿರುತ್ತದೆ. ಒಟ್ಟಿನಲ್ಲಿ ಪವಿತ್ರ ಖುರ್‌ಆನ್‌ನ ಇಂಗಿತದಿಂದ ಜೀವಂತರ ಸಹವಾಸ ಮಾಡಲು, ತಾಕೀತು ಸಾಬೀತಾಗಿದೆ.

**(ಮಲ್ಫೂಝಾತ್, ಸಂ-1, ಪುಟ-462, ಮುದ್ರಣ 2018 ಖಾದಿಯಾನ್)**

**ಒಳ್ಳೆಯದನ್ನು ಮಾಡುವ ವ್ಯಕ್ತಿಯ ಮೇಲೆ ಅವನ ಇಡೀ ಹೃದಯವು ಜ್ಞಾನೋದಯವಾಗುವವರೆಗೆ ಮತ್ತು ಅವನು ಮೋಕ್ಷವನ್ನು ಪಡೆಯುವವರೆಗೆ ಒಳ್ಳೆಯತನದ ಪ್ರಕಾಶವು ಹೆಚ್ಚುತ್ತಲೇ ಇರುತ್ತದೆ,**

**ಮತ್ತು ಕೆಟ್ಟದ್ದನ್ನು ಮಾಡುವವನ ಹೃದಯವು ದಿನವಿಡೀ ಕಪ್ಪು ಆಗುತ್ತದೆ ಮತ್ತು ಆ ವ್ಯಕ್ತಿಯು ಸಾಯುವವರೆಗೂ ಅವನ ಹೃದಯದ ಮೇಲೆ ಕಪ್ಪು ಕಲೆಗಳು ಬೆಳೆಯುತ್ತಲೇ ಇರುತ್ತದೆ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಇಸ್ರಾಈಲ್‌ನ ಆಯತ್ **ವಕುಲ್ಲ ಇನ್ಸಾನಿನ್ ಅಲ್‌ಝಮ್ನಾಹು ತಾಯಿರಹೂ ಫೀ ಉನುಖಿಹೀ; ವ ನುಖ್ರಿಜು ಲಹು ಯೌಮಲ್ ಖಿಯಾಮತಿ ಕಿತಾಬನ್ ಯಲ್‌ಖಾಹು ಮನ್‌ಶೂರ.** (ಅನುವಾದ: ಪ್ರತಿಯೊಬ್ಬನ ಕರ್ಮಕಡತವನ್ನು ನಾವು ಅವನ ಕೊರಳಿಗೆ ಕಟ್ಟಿದ್ದೇವೆ. ಪುನರುತ್ಥಾನ ದಿನದಂದು ಅವನಿಗೋಸ್ಕರ ಒಂದು ಪುಸ್ತಕವನ್ನು ನಾವು ಹೊರತರುವೆವು. ಅದನ್ನು ತೆರೆದಿಟ್ಟಿರುವುದಾಗಿ ಅವನು ಕಾಣುವನು) ಇದನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ:

ಪ್ರತಿಯೊಂದು ಕ್ರಿಯೆಯು ವ್ಯಕ್ತಿಯ ಹೃದಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ. ಅವನು ಒಳ್ಳೆಯದನ್ನು ಮಾಡಿದರೆ, ಅವನ ಹೃದಯದ ಮೇಲೆ ಪ್ರಕಾಶದ ಗುರುತು ಉಂಟಾಗುತ್ತದೆ ಮತ್ತು ಅವನು ಕೆಟ್ಟದ್ದನ್ನು ಮಾಡಿದರೆ ಅವನ ಹೃದಯದ ಮೇಲೆ ಕಪ್ಪು ಗುರುತು ಉಂಟಾಗುತ್ತದೆ. ಅದೇ ರೀತಿ ಒಳಿತನ್ನು ಮಾಡುವ ವ್ಯಕ್ತಿಯ ಹೃದಯದಲ್ಲಿ ಒಳ್ಳೆಯತನದ ಬೆಳಕು ಹೆಚ್ಚುತ್ತಲೇ ಇರುತ್ತದೆ. ಅವನ ಹೃದಯವೆಲ್ಲವೂ ಪ್ರಕಾಶಮಾನವಾಗುತ್ತದೆ ಮತ್ತು ಮೋಕ್ಷವನ್ನು ಪಡೆಯುತ್ತದೆ. ಕೆಟ್ಟದ್ದನ್ನು ಮಾಡುವವನ ಹೃದಯವು ಕಪ್ಪು ಆಗುತ್ತದೆ ಮತ್ತು ಆ ವ್ಯಕ್ತಿಯು ಸಾಯುವವರೆಗೂ ಅವನ ಹೃದಯದ ಮೇಲೆ ಕಪ್ಪು ಕಲೆಗಳು ಬೆಳೆಯುತ್ತಲೇ ಇರುತ್ತದೆ. ಕೆಲವರು ತಾಯಿರ್ ಎಂಬ ಪದವನ್ನು ವಿಧಿ ಎಂದು ಅರ್ಥೈಸಿಕೊಂಡಿದ್ದಾರೆ. ಆದರೆ ಈ ಅರ್ಥವು ಸಾಧ್ಯವಿಲ್ಲ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

## ಮನೆ ನಿರ್ಮಾಣ ಮಾಡುವ ಬಂಧುಗಳು, ತಮ್ಮ ಮನೆಗಳಲ್ಲಿ ಹೆಸರಿಸುವುದು ಅವಶ್ಯಕವಾಗಿದೆ.

**(ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)**

ದೀರ್ಘಾವಧಿಯ ನಂತರ ನನಗೆ ಒಮ್ಮೆ ಖಾದಿಯಾನಿನಲ್ಲಿ ಮಿತ್ರರೊಬ್ಬರ ಮನೆಗೆ ಹೋಗಬೇಕಾಯಿತು. ಅವರ ಮನೆ "ದಾರುಲ್ ರಹ್ಮತ್" ಬಡಾವಣಿಯಲ್ಲಿತ್ತು. ಕೆಲವು ಜನರೊಂದಿಗೆ ಅವರ ವಿಳಾಸವು ಕೇಳಿದೆ. ಆದರೆ ಕೊನೆಗೆ ಎರಡು ಗಂಟೆಗಳ ಹುಡುಕಾಟದಲ್ಲಿಯೂ ವಿಫಲಗೊಂಡು ಮರಳಿ ಬರಬೇಕಾಯಿತು. ಕಾರಣವೇನೆಂದರೆ ಮನೆಯ ಹೊರಗೆ ಅವರ ಅಥವಾ ಮನೆಯ ಹೆಸರು ಬರೆಯಲಾಗಿರಲಿಲ್ಲ. ಅದಾದ ನಂತರ ಸದ್ಯದಲ್ಲೇ ನಾನು ಮತ್ತು ಹಜರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬರು ಅದೇ ಓಣಿಯಲ್ಲಿ ಒಬ್ಬರ ಮನೆಗೆ ಹೋಗಿದ್ದೆವು. ತಡವಾಗುವವರೆಗೆ ಅವರ ಮನೆ ಸಿಗದ ಕಾರಣ ನಾನಂತೂ ಮರಳಿ ಬಂದೆ. ಆದರೆ ಹಝುರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬರು ಹಾಗೆಯೇ ತಿರುಗಿ ತಿರುಗಿ, ಕೇಳಿ ಕೇಳಿ ಅವರ ಮನೆ ಪತ್ತೆ ಹಚ್ಚಿದರು. ಇದರಿಂದ ನಾನು ವ್ಯಕ್ತಪಡಿಸುವ ಉದ್ದೇಶವೇನೆಂದರೆ ಮನೆಗಳ ಮುಂದೆ ಹೆಸರುಗಳಿದ್ದರೆ, ಅದರ ಬಾಗಿಲುಗಳ ಮೇಲೆ ಹೆಸರು ಬರೆಯಲಾಗಿದ್ದರೆ, ಮನೆ ಪತ್ತೆ ಹಚ್ಚಲಿಕ್ಕೆ ಮತ್ತು ಅಂಚೆಯವನಿಗೆ ಕಾಗದಗಳನ್ನು ತಲುಪಿಸಲು ಸುಲಭವಗುತ್ತದೆ. ಕೆಲವರು ನಾಚಿಕೆಪಟ್ಟು ತಮ್ಮ ಮನೆಗಳ ಹೆಸರು ಇರಿಸುವುದಿಲ್ಲ ಅಥವಾ ಕೆಲವರು ಒಳ್ಳೆಯ ಹೆಸರುಗಳನ್ನಿಡುವುದು ದುರಹಂಕಾರವೆಂದು ಭಾವಿಸುತ್ತಾರೆ. ಆದರೆ ಹೆಸರುಗಳು ದುರಹಂಕಾರಕ್ಕಾಗಿ ಅಲ್ಲ. ಬದಲು ಸದ್ಭಾವನೆಯಿಂದಾಗಿ ಒಳ್ಳೆಯ ಹೆಸರನ್ನು ಇಡಲಾಗುತ್ತದೆ. ತನ್ನ ಮಗನ ಹೆಸರು ನೂರುದ್ದೀನ್ ಎಂದು ಹೆಸರಿಡುವುದು ದುರಹಂಕಾರ ಎಂದು ಭಾವಿಸುವುದು ಆಶ್ಚರ್ಯಕರವಲ್ಲವೆ ಅಥವಾ ಮನೆಯ ಹೆಸರು "ಬೈತನ್ನುರು" ಇಡಲು ನಾಚಿಕೆಪಡುವರೇ.

ಈಗ ನಾನು ಸ್ಪಷ್ಟಪಡಿಸಬಯಸುತ್ತೇನೆ. ಅಹ್ಮದಿಯರು ತಮ್ಮ ಮನೆಗಳ ಹೆಸರನ್ನಿಡುವುದು ರಸೂಲುಲ್ಲಾಹ್(ಸ) ರ ಸುನ್ನತ್ ಎಂದು ಭಾವಿಸುವ ಮಟ್ಟಕ್ಕೆ ತಲುಪಿದ್ದಾರೆ. ಅಲ್ಲಾಹನ ದಿವ್ಯವಾಣಿಗಳು ಮತ್ತು ಹಝುರತ್ ಮಸೀಹ್ ಮೌಊದ್(ಅ) ರವರ ನಡವಳಿಕೆ ಇದನ್ನು ಸಕ್ರಮಗೊಳಿಸಿದೆ. ಆದ್ದರಿಂದ ನೋಡಿರಿ. ಹಝ್ರತ್ ಮಸೀಹ್ ಮೌಊದ್(ಅ) ದಿವ್ಯವಾಣಿ ಅವತರಿಸುವ ಪ್ರಾರಂಭದ ದಿನಗಳಲ್ಲಿಯೇ ಅವರ ಮನೆಗಳ ಎರಡು ಭಾಗಗಳಿಗೆ ದಿವ್ಯವಾಣಿಗಳ ಮೂಲಕ ಹೆಸರುಗಳನ್ನು ತಿಳಿಸಲಾಯಿತು. ಎಂದರೆ "ಬೈತುಲ್ ಫಿಕರ್" ಮತ್ತು ಬೈತುಝ್-ಝಿಕ್ರ್" (ಬೈತುಲ್ ಫಿಕ್ರ್ ಎಂಬುದು ಮಸೀದಿಗೆ ಸೇರುವಂತಿದೆ, ಅದರಲ್ಲಿ ಬರಾಹೀನ್ ಅಹ್ಮದಿಯಾ ಗ್ರಂಥ ರಚನೆಗೊಂಡಿತು. ಬೈತುಲ್-ಝಿಕ್ರ್ ಸ್ವಯಂ ಮಸ್ಜಿದ್ ಮುಬಾರಕ್‌ನ ಹೆಸರಾಗಿದೆ) ಆಗಲೇ ಹುಝೂರ್(ಅ) ರಿಗೆ ದೈವಿಕ ಇಂಗಿತ ದೊರೆತಿತ್ತು. ಅನಂತರ ಎಷ್ಟೆಲ್ಲ ಮನೆಗಳು ವಿಸ್ತಾರಗೊಂಡವು. ಅದರ ಎಲ್ಲ ಭಾಗಗಳಿಗೆ ಸ್ವಯಂ ಹೆಸರುಗಳನ್ನು ಇಟ್ಟರು. ಉದಾಹರಣೆಗೆ "ದಾರುಲ್ ಬರಕಾತ್" ಬೈತುನ್ನುರ್, ಬೈತುದ್ದುಆ, ಇತ್ಯಾದಿ ಅವರೇ ಇಟ್ಟಿದ ಹೆಸರುಗಳಾಗಿವೆ. ಅದರ ಅನುಸರಣೆಯಾಗಿ ಹಝುರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಸಾನಿ(ಅಬಿಅ) ತನ್ನ ಕೊಠಡಿಯ ಹೆಸರು "ದಾರುಲ್ ಹಮ್ದ್ ಎಂದು ಇಟ್ಟರು. ಒಟ್ಟಿನಲ್ಲಿ ನಮಗೆ ಇದು ಮಾದರಿಯಾಗಿ ಬಂದಿವೆ. ಮತ್ತು ದೈವಿಚ್ಛೆಯೂ ಇದಾಗಿದೆ. ಆದ್ದರಿಂದ ನಾನು ಮಿತ್ರರನ್ನು ಈ ಕಡೆ ಗಮನ ಸೆಳೆಯಬಯಸುತ್ತೇನೆ. ಎಂದಾದರು ಸಹ ನೀವು ಮನೆಗಳನ್ನು ನಿಮಾಣ ಮಾಡಿದರೆ ತಮ್ಮ ಮಕ್ಕಳ ಹೆಸರಿಡುವ ಹಾಗೆಯೇ ಮನೆಗಳ ಹೆಸರನ್ನಿಡಿರಿ. ವಿಶೇಷವಾಗಿ ಖಾದಿಯಾನ್‌ನಲ್ಲಿರುವ ಬಂಧುಗಳು ಅವಶ್ಯಕವಾಗಿ ಈ ಸುನ್ನತ್ ಮೇಲೆ ನಡೆದುಕೊಳ್ಳಬೇಕಾಗಿದೆ. ಮನೆ ಸಣ್ಣದಾಗಿವೆ, ನಮ್ಮ ಹೈಸತ್ತೇನು ಎಂದು ಭಾವಿಸಬೇಡಿರಿ. ಸಣ್ಣವರ ಅಥವಾ ಹೈಸತ್ತಿಲ್ಲದವರ ಹೆಸರಿರುವುದಿಲ್ಲವೇ. ಹಝ್ರತ್ ಮಸೀಹ್ ಮೌಊದ್(ಅ) ರವರ ಹಿತ್ತಲ ಮನೆಗಿಂತ ವಿಸ್ತರಣೆಯಲ್ಲಿ ಸಣ್ಣದಾದ ಮನೆಯಿದೆ. ಅದರ ಹೆಸರು ಸಹ ಹುಝೂರ್(ಅ) ಬೈತುನ್ನುರ್ ಎಂದು ಹೆಸರಿಸಿದರು. ಅದಲ್ಲದೇ ಇನ್ನೊಂದು ಪ್ರಯೋಜನವೆಂದರೆ ಒಳ್ಳೆಯ ಹೆಸರುಗಳಲ್ಲಿ ಇರುವ ಅನುಗ್ರಹಗಳು ತಮಗೆ ದೊರೆಯುವಂತಾಗುವುದು.

ಕೊನೆಯಲ್ಲಿ ನೆನಪಿಡಬೇಕಾದುದೇನೆಂದರೆ, ಮನೆಗೆ ಯಾವ ಹೆಸರಿಟ್ಟರೂ ಅದು ಚೆನ್ನಾಗಿರಬೇಕು ಮತ್ತು ಅನುಗ್ರಹದಾಯಕ ಅರ್ಥವುಳ್ಳದ್ದಾಗಿರಬೇಕು. ಅವರು ಸೂಚಿಸಿದ್ದಾಗಬಹುದು. ಅದು ಒಳ್ಳೆಯ ಹಾಗೂ ಎಂತಹ ಸಂಕ್ಷಿಪ್ತವಾಗಿರಬೇಕೆಂದರೆ ಅದು ಎಲ್ಲರೂ ಉಚ್ಚರಿಸುವಂತಿರಬೇಕು. ಮನೆ ಮಾಲೀಕನು ತನ್ನ ಹೆಂಡತಿ ಮಕ್ಕಳ ಹೆಸರುಗಳನ್ನಿಟ್ಟರೂ ಸರಿಯೇ. ನಿರ್ಮಾಣಗೊಂಡ ತಾರೀಖು ನಮುದಿಸಲಾಗಿದ್ದರೆ ಇನ್ನೂ ಒಳ್ಳೆಯದು **ನೂರುನ್ ಅಲಾ ನೂರ್**.

ಕೆಲವು ತಿಂಗಳುಗಳಷ್ಟೇ ಕಳೆದಿವೆ. ಸ್ವತ: ನನಗೆ ನನ್ನ ಮನೆಯ ಹೆಸರುಗಳನ್ನಿಡಲು ಹುಡುಕಾಟ ಮಾಡಬೇಕಾಯಿತು. ಆ ಸಮಯ ಹಲವು ಹೆಸರುಗಳು ನನಗೆ ಮೂಡಿಬಂದವು. ಅದು ಕೆಳಗೆ ನಮೂನೆಯ ರೂಪದಲ್ಲಿ ಬಂಧುಗಳಿಗೆ ಪ್ರಯೋಜನವಾಗಲು ಬರೆಯುತ್ತೇನೆ. ಅದೇ ದಿನಗಳಲ್ಲಿ ಒಮ್ಮೆ ಮು. ಮಿಸ್ಬಾಹುದ್ದೀನ್ ಸಾಹಿಬ್ ನನ್ನ ಬಳಿ ಆಗಮಿಸಿದರು ಮತ್ತು ಹೇಳಿದರು. ತಾನು ಒಂದೇ ಮನೆಯನ್ನು ಕಟ್ಟಿಸಿದ್ದೇನೆ. ನಾನು ಅದರ ಹೆಸರು "ಮುಹಬ್ಬತ್ ಸರಾಯೆ ಎಂದು ಇಡಬಯಸುತ್ತೇನೆ ಎಂದರು. ನಾನು ಹೇಳಿದೆ. ನಿಮ್ಮ ಮನೆಯ ಹೆಸರು ಝುಜಾಜ ಎಂದಾಗಬೇಕಾಗಿದೆ. ಏಕೆಂದರೆ ಅದು ಖುರ್‌ಆನ್‌ನ ವಚನ **"ಅಲ್‌ಮಿಸ್ಬಾಹು ಫೀ ಝುಜಾಜ** ಪೈಕಿ ಹೆಚ್ಚು ಹೊಂದುವಂತಿದೆ. (ಮಿಸ್ಬಾಹ ಅರ್ಥ ದೀಪ ಮತ್ತು ಝುಜಾಜ ಅರ್ಥ ಗಾಜಿನ ಲಾಂಟೇನ್ ಎಂದಾಗಿದೆ) ಆದ್ದರಿಂದ ಹೆಸರನ್ನಿಡುವಾಗ, ಒಂದು ವಿಶಿಷ್ಟವಾದ ಪದ ಹೊಂದುವಂತಿದ್ದರೆ ಅದನ್ನೇ ಇಡುವುದು ಸೂಕ್ತವಾಗಿರುತ್ತದೆ.

ಈಗ ನಾನು ಆ ಹೆಸರುಗಳನ್ನು ಬರೆಯುತ್ತೇನೆ. ಅಲ್‌ಗ್ದರ್ ಫ, ಅಲ್ ಮೆಹರಾಬ್, ಕೌಕಬ್, ಅಸ್ಸಫೀನ, ಅಸಸಕೀನಾ, ಅರ್‌ರೌಝು, ಝೀನತ್, ಅನ್ನಜಮ್, ಅಲ್‌ಫಿಲ, ಅಲ್‌ಮಸ್ಕನ್, ಅತ್ತಯ್ಯಬ್, ಆಝೀರ್ಮನ್ ಝೀ ಮಿನಾರ ವೀವ್, ವಸಿಅ್ ಮಕಾನಕ, ಅಹ್ಮದಿ ಮನ್‌ಝಿಲ್, ಕಾಶಾನ, ಆಶಿಯಾನ, ಗೋಷಿಯೆ ತಹಹಾಯಿ, ಗೋಷಯೇ ಆಫಿಯತ್, ಗುಲ್‌ಶನ್, ಗುಲಿಸ್ತಾನ್, ಹದೀಖ, ಫಝುಲ್ ಇಲಾಹಿ, ಗ್ದರೀಬ್ ಖಾನ್, ಮುಬ್ಬತ್ ಸಆರಾಯೆ, ಹಸ್ಬಿಯುಲ್ಲಾಹ್, ಇನ್‌ಆಮೆ ಇಲಾಹಿ, ಇನಾಯತೆ ಇಲಾಹಿ, ಇತ್ಯಾದಿ, ಇತ್ಯಾದಿ ಇದಲ್ಲದೇ ಮನ್‌ಝಿಲ್, ಮಹಲ್, ದರ್, ಬೈತ್, ಖಾನ, ಹೌಸ್, ಬಿಲ್ಡಿಂಗ್ ಪದಗಳೊಂದಿಗೆ ಮಾಲೀನ ಹೆಸರು ಅಥವಾ ಇನ್ನೊಂದು ಪದವನ್ನು ಸೇರಿಸಿ ಮನೆಯ ಹೆಸರು ಇಡಬಹುದಾಗಿದೆ. ಉದಾಹರಣೆಗೆ ಫಕೀರ್ ಮನ್‌ಝಿಲ್, ನೂರ್ ಮಹಲ್, ದಾರುಲ್ ಫಝುಲ್, ಬೈತುಝ್, ಝುಫರ್, ಖಾನ್‌ಯೇ, ದರವೇಶ್, ನುರ್ ಬಿಲ್ಡಿಂಗ್ಸ್, ಇತ್ಯಾದಿ.

ಐತಿಹಾಸಿಕ ಹೆಸರುಗಳನ್ನು, ಇತಿಹಾಸ ತಜ್ಞರ ಹೊರತಾಗಿ, ಎಲ್ಲರೂ ಮಾಡುವಂತಿಲ್ಲ. ಮಸ್ಜಿದ್ ಮುಬಾರಕ್ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ರ ದಿವ್ಯವಾಣಿ ಹೇಗಿದೆ ಎಂದರೆ ಅದು ಐತಿಹಾಸಿಕ ದೃಷ್ಟಿ ಹೊಂದಿದೆ. ಅದು ಹೀಗಿದೆ. **ಮುಬಾರಕನ್ ವ ಮುಬಾರಿಕುನ್ ವ ಕುಲ್ಲು ಅಮರಿನ್ ಮುಬರಕಿಂ ಯುಜ್‌ಅಲು ಫೀಹಿ** (1300 ಹಿ) ಆದ್ದರಿಂದ ಯತಿಹಾಸಿಕ ಹೆಸರನ್ನಿಡುವುದು ದೈವಿಚ್ಛೆಯ ಪ್ರಕಾರವಾಗಿರುತ್ತದೆ. ಈ ಐತಿಹಾಸಿಕ ಹೆಸರುಗಳು ಒಂದು ಶಾಶ್ವತ ರೂಪದಲ್ಲಿ ಬಳಕೆಯಾಗುತ್ತವೆ ಅಥವಾ ಮನೆ ಅಸಲು ಹೆಸರು ಬೇರೆ ಆಗಿರುತ್ತದೆ ಮತ್ತು ಐತಿಹಾಸಿಕ ಬೇರೆಯಾಗಿರುತ್ತದೆ.

ನಮೂನೆಯ ರೂಪದಲ್ಲಿ ಕೆಲವು ಐತಿಹಾಸಿಕ ಹೆಸರುಗಳನ್ನು ಪ್ರಸ್ತುತಪಡಿಸುತ್ತೇನೆ.

ದಾರುಲ್ ಹಮ್ದು ಹಝ್ರತ್ ಅಖದಸ್:
"ದಾರುಲ್ ಹಮ್ದು ಹಝ್ರತ್ ಮಹ್ಮೂದ್ ಇಮಾಮ್ ಜಹಾಂ" (1932)
ಅನ್ನುಸ್‌ರತ್ ಹಝ್ರತ್ ಉಮ್ಮುಲ್ ಮುಮಿನೀನ್:
"ಗುಲ್ಜಾರ್ ಮನ್ಸೂರ್" (1934)
ಕೋಠಿ ಚೌದರಿ ಸಾಹಿಬ್.
ಪಾಯೆಗಾ: ಝುಫರುಲ್ಲಹ್ ಖಾನ್" (1936)

**ಅಸ್ಸುಫ:**

"ಸುಫ: ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್" (1354ಹಿ)

ಮುಂದೆ ಭವಿಷ್ಯದಲ್ಲಿ ಇನ್‌ಶಾಅಲ್ಲಾಹ್ ಕೆಲವು ವಚನಗಳ ಅಥವಾ ಕವನ ಸಾಲುಗಳನ್ನು ಬರೆಯುವೆನು ಅದನ್ನು ಮನೆಗಳ ಮೇಲೆ ಬರೆಯ ಬಹುದಾಗಿದೆ. ಏಕೆಂದೆ ಸಾಮಾನ್ಯವಾಗಿ ಜನರಿಗೆ ಇಂದು ಆ ಬಗ್ಗೆ ಬಹಳ ಆಸಕ್ತಿ ಕಂಡುಬರುತ್ತದೆ. **(ಮುದ್ರಣ ದಿನಪತ್ರಿಕೆ ಅಲ್‌ಫಝುಲ್ ಖಾದಿಯಾನ್ 22 ಆಗಸ್ಟ್ 1936 ಪುಟ 4)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

# ಖುತ್‌ಬ ಜುಮುಅ

.......ನಮ್ಮ ವಿರೋಧಿಗಳ ಹಗಲು ರಾತ್ರಿಯ ಪ್ರಯತ್ನಗಳು ಇದ್ದೂ ಈ ಜಮಾಅತ್ ವರ್ಧಿಸುತ್ತಾ ಹೋಗುತ್ತಿದೆ. (ಹಝ್ರತ್ ಮಸೀಹ್ ಮೌಊದ್(ಅ))

ಅಲ್ಲಾಹನು ಯಾರನ್ನು ನಿಯೋಜಿಸುತ್ತಾನೋ ಮತ್ತು ಯಾರು ನಿಜವಾಗಿಯೂ ಅಲ್ಲಾಹನ ಕಡೆಯಿಂದ ಆಗಿರುತ್ತಾರೋ ಅಂಥವರು ದಿನನಿತ್ಯ ಪ್ರಗತಿ ಹೊಂದುತ್ತಾರೆ ಮತ್ತು ಅಭಿವೃದ್ಧಿ ಹೊಂದುತ್ತಾರೆ ಹಾಗೂ ಅವರ ಜಮಾಅತ್ ದಿನೇ ದಿನೇ ಉಜ್ವಲಗೊಳ್ಳುತ್ತದೆ. ಅದರ ವಿರೋಧಿಗಳು ಬಹಳ ವಿಷಾದದಿಂದ ಸಾಯುತ್ತಾರೆ. ಅಲ್ಲಾಹನು ಯಾರನ್ನು ಬೆಳೆಸಲು ಬಯಸುತ್ತಾನೋ ಅವರನ್ನು ತಡೆಯಲು ಯಾರಿಂದಲೂ ಸಾಧ್ಯವಲ್ಲ. ಏಕೆಂದರೆ ತಡೆಯುವವನ ಪ್ರಯತ್ನದಿಂದ ಆ ಜಮಾಅತ್ ನಿಂತುಹೋದರೆ, ತಡೆಯುವವನು ಅಲ್ಲಾಹನ ಮೇಲೆ ಜಯ ಗಳಿಸಿದನು ಎಂದು ಸಮ್ಮತಿಸಬೇಕಾಗುವುದು. ಆದರೆ ಅಲ್ಲಾಹನ ಮೇಲೆ ಯಾರಿಗೂ ವಿಜಯ ಸಾಧಿಸಲು ಸಾಧ್ಯವಲ್ಲ. (ಹಝ್ರತ್ ಮಸೀಹ್ ಮೌಊದ್(ಅ))

ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತನ್ನು ಊದಿ ನಂದಿಸಬಹುದು ಎಂದು ಈ ನಾಮಧಾರಿಗಳಾದ ಉಲೇಮಾಗಳು ಮತ್ತು ವಿರೋಧಿಗಳು ಭಾವಿಸುತ್ತಾರೆ. ಆದರೆ ಅವರು ಅಲ್ಲಾಹನ ವಿರುದ್ಧವಾಗಿ ಹೋರಾಡುತ್ತಿದ್ದಾರೆ ಎಂದು ಅವರಿಗೆ ಗೊತ್ತಾಗುತ್ತಿಲ್ಲ. ಅಲ್ಲಾಹನ ಎದುರಾಗಿ ನಿಲ್ಲುವುದರಿಂದ ತಾವೇ ನಾಶವಾಗುವೆವು ಎಂದೂ ಅಲ್ಲಾಹನು ತನ್ನ ದಾಸರಿಗೆ ಸಹಾಯ ಮತ್ತು ನೆರವು ನೀಡುತ್ತಾನೆ. ಎಂದೂ ಅವರಿಗೆ ಗೊತ್ತಾಗುವುದಿಲ್ಲ.

ಪಾಕಿಸ್ತಾನದಲ್ಲಿಯೂ ಒಂದೆಡೆ ನಮ್ಮ ಮಿನಾರುಗಳನ್ನು ಕೆಡವಲಾಗುತ್ತಿದೆ. ಮಸೀದಿಗಳ ಕಮಾನುಗಳನ್ನು ಕೆಡವಲಾಗುತ್ತಿದೆ. ಮತ್ತೊಂದೆಡೆ, ಸರ್ವಶಕ್ತನಾದ ಅಲ್ಲಾಹನು ನಮಗೆ ಇತರ ಸ್ಥಳಗಳಲ್ಲಿ ಸುಂದರವಾದ ಮಸೀದಿಗಳನ್ನು ನೀಡುತ್ತಿದ್ದಾನೆ ಮತ್ತು ಅವುಗಳನ್ನು ಹೇರಳವಾಗಿ ನೀಡುತ್ತಿದ್ದಾನೆ.

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯಾಂಶ ಹಾಗೂ ಜಮಾಅತ್ತಿನ ಸಾರ್ವತ್ರಿಕ ಪ್ರಗತಿಯನ್ನು ಪ್ರತಿಬಿಂಬಿಸುವ ಕೆಲವು ವಿಶ್ವಾಸ ವರ್ಧಕ ಘಟನೆಗಳ ಪ್ರಸ್ತಾವನೆ**

ಇತ್ತೀಚಿಗೆ ನಿಧನಹೊಂದಿದ ನಾಲ್ಕು ದಿವಂಗತರಾದ ಮಾನ್ಯ ಗುಲಾಮ್ ಖಾದಿರ್ ಸಿಯಾಲ್ಕೋಟ್ ಅವರ ಪತ್ನಿ ಪರ್ವೀನ್ ಅಖ್ತರ್ ಸಾಹಿಬ, ಚೌಧರಿ ವಸೀಮ್ ಅಹ್ಮದ್ ನಾಸಿರ್ ಸಾಹಿಬ್ ದಿವಂಗತ ಘಟ್ಯಾಲಿಯಾನ್ ಅವರ ಪತ್ನಿ ಮುಮ್ತಾಜ್ ವಸೀಮ್ ಸಾಹಿಬಾ, ಬ್ರಿಗೇಡಿಯರ್ ಮನವ್ವರ್ ಅಹ್ಮದ್ ರಾಣಾ ಸಾಹಿಬ್ ಹಾಗೂ ಅಬ್ದುಲ್ ಶಕೂರ್ ಮಲಿಕ್ ಸಾಹಿಬ್‌ರವು ಗುಣಲಕ್ಷಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-05-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ۔ بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಹ್ಮದಿಯಾ ಜಮಾಅತಿನ ಮೇಲೆ ಅಲ್ಲಾಹನ ವರದಾನ ಮತ್ತು ಅದು ವರ್ಧಿಸುತ್ತಾ ಹೋಗುತ್ತಿರುವ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದು ಕೂಡ ಪ್ರತಾಪವಂತನಾದ ಅಲ್ಲಾಹನ ದೊಡ್ಡ ಪವಾಡವಾಗಿದೆ. ಅದೇನೆಂದರೆ, ಇಷ್ಟೆಲ್ಲ ನಿರಾಕರಣೆಗಳು ಮತ್ತು ವಿರೋಧಿಗಳ ಹಗಲು ರಾತ್ರಿಯ ಪ್ರಯತ್ನಗಳು ಇದ್ದೂ ಈ ಜಮಾಅತ್ ವರ್ಧಿಸುತ್ತಾ ಹೋಗುತ್ತಿದೆ. ಇದರಲ್ಲಿರುವ ಯುಕ್ತಿ ಏನೆಂದು ನಿಮಗೆ ಗೊತ್ತೇ? ಇದರ ರಹಸ್ಯವೇನೆಂದರೆ, ಅಲ್ಲಾಹನು ಯಾರನ್ನು ನಿಯೋಜಿಸುತ್ತಾನೋ ಮತ್ತು ಯಾರು ನಿಜವಾಗಿಯೂ ಅಲ್ಲಾಹನ ಕಡೆಯಿಂದ ಆಗಿರುತ್ತಾರೋ ಅಂಥವರು ದಿನನಿತ್ಯ ಪ್ರಗತಿ ಹೊಂದುತ್ತಾರೆ ಮತ್ತು ಅಭಿವೃದ್ಧಿ ಹೊಂದುತ್ತಾರೆ ಹಾಗೂ ಅವರ ಜಮಾಅತ್ ದಿನೇ ದಿನೇ ಉಜ್ವಲಗೊಳ್ಳುತ್ತದೆ. ಅದರ ವಿರೋಧಿಗಳು ಬಹಳ ವಿಷಾದದಿಂದ ಸಾಯುತ್ತಾರೆ. ಅಲ್ಲಾಹನು ಯಾರನ್ನು ಬೆಳೆಸಲು ಬಯಸುತ್ತಾನೋ ಅವರನ್ನು ತಡೆಯಲು ಯಾರಿಂದಲೂ ಸಾಧ್ಯವಲ್ಲ. ಏಕೆಂದರೆ ತಡೆಯುವವನ ಪ್ರಯತ್ನದಿಂದ ಆ ಜಮಾಅತ್ ನಿಂತುಹೋದರೆ, ತಡೆಯುವವನು ಅಲ್ಲಾಹನ ಮೇಲೆ ಜಯ ಗಳಿಸಿದನು ಎಂದು ಸಮ್ಮತಿಸಬೇಕಾಗುವುದು. ಆದರೆ ಅಲ್ಲಾಹನ ಮೇಲೆ ಯಾರಿಗೂ ವಿಜಯ ಸಾಧಿಸಲು ಸಾಧ್ಯವಲ್ಲ. (ಮಲ್‌ಫೂಝಾತ್, ಸಂಪುಟ-10, ಪುಟ-24, 1984)

ಹಝ್ರತ್ ಮಸೀಹ್ ಮೌಊದ್(ಅ)ರ ಈ ಮಾತುಗಳು ಈಡೇರುತ್ತಿರುವ ದೃಶ್ಯಗಳನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಶತ್ರುಗಳು ಒಬ್ಬೊಬ್ಬರಾಗಿಯೂ ಒಟ್ಟಾಗಿಯೂ ಪ್ರಯತ್ನಿಸಿದರು. ಆದರೆ "ನಾನು ನಿನ್ನ ಸಂದೇಶವನ್ನು ಭೂಮಿಯ ಎಲ್ಲೆಗಳಿಗೆ ತಲುಪಿಸುವೆನು." (ತಧ್‌ಕಿರ, ಪುಟ-260, ಸಂಚಿಕೆ-4) "ನಾನು ನಿನ್ನ ನಿಷ್ಠಾವಂತರ ಮತ್ತು ಪ್ರಾಮಾಣಿಕ ಸ್ನೇಹಿತರ ಗುಂಪನ್ನು ವರ್ಧಿಸುವೆನು" (ಆಇನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-5, ಪುಟ-48) ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ವಾಗ್ದಾನ ಮಾಡಿದ್ದನು. ಈ ವಾಗ್ದಾನಗಳ ಪ್ರಕಾರ ಜಮಾಅತ್ ಹರಡುತ್ತಿರುವುದಾಗಿ ನಾವು ನೋಡುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತನ್ನು ಊದಿ ನಂದಿಸಬಹುದು ಎಂದು ಈ ನಾಮಧಾರಿಗಳಾದ ಉಲೇಮಾಗಳು ಮತ್ತು ವಿರೋಧಿಗಳು ಭಾವಿಸುತ್ತಾರೆ. ಆದರೆ ಅವರು ಅಲ್ಲಾಹನ ವಿರುದ್ಧವಾಗಿ ಹೋರಾಡುತ್ತಿದ್ದಾರೆ ಎಂದು ಅವರಿಗೆ ಗೊತ್ತಾಗುತ್ತಿಲ್ಲ. ಅಲ್ಲಾಹನ ಎದುರಾಗಿ ನಿಲ್ಲುವುದರಿಂದ ತಾವೇ ನಾಶವಾಗುವೆವು ಎಂದೂ ಅಲ್ಲಾಹನು ತನ್ನ ದಾಸರಿಗೆ ಸಹಾಯ ಮತ್ತು ನೆರವು ನೀಡುತ್ತಾನೆ. ಎಂದೂ ಅವರಿಗೆ ಗೊತ್ತಾಗುವುದಿಲ್ಲ.

ಅಲ್ಲಾಹನ ನೆರವು ಮತ್ತು ಸಹಾಯದ ದೃಶ್ಯಗಳನ್ನು ನಾವು ಲೋಕದ ದೂರ ದೂರ ದೇಶಗಳಲ್ಲೂ ನೋಡುತ್ತಿದ್ದೇವೆ. ಸಾಮಾನ್ಯವಾಗಿ ಕೆಲವೊಮ್ಮೆ ಮನುಷ್ಯನು ತಲುಪಲು ಸಾಧ್ಯವಿಲ್ಲದ ಮತ್ತು ಬಹಳ ಕಷ್ಟಕರವಾದ ರಸ್ತೆಗಳು ಇರುವ ಪ್ರದೇಶಗಳಲ್ಲೂ ಅಲ್ಲಾಹನು ತನ್ನ ಸಹಾಯದ ದೃಶ್ಯಗಳನ್ನು ತೋರಿಸುತ್ತಾನೆ. ವಿರೋಧಿಗಳು ತಮ್ಮ ಎಲ್ಲ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಅವರು ಸೋಲನ್ನು ಕಾಣುವಂತಾಗುತ್ತಾರೆ.

ಕೆಲವೆಡೆ ಜೀವ ಮತ್ತು ಸಾಂಪತ್ತಿಕ ನಷ್ಟಗಳನ್ನು ಮಾಡಿಕೊಂಡು ಜಮಾಅತಿನ ಸದಸ್ಯರನ್ನು ಗಾಬರಿಗೊಳಿಸಲು ಬಯಸುತ್ತಾರೆ. ಆದರೆ ಈ ಸಂಗತಿಗಳು ಜಮಾಅತಿನ ಸದಸ್ಯರ ನಂಬಿಕೆಯನ್ನು ಹೆಚ್ಚಿಸುತ್ತದೆ.

ಲೋಕದಲ್ಲಿ ಅಲ್ಲಾಹನ ಸಹಾಯದ ಘಟನೆಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಡನೆ ಅಲ್ಲಾಹನು ಮಾಡಿರುವ ವಾಗ್ದಾನಗಳು ಹೇಗೆ ಈಡೇರುತ್ತಿವೆ ಎಂಬುದನ್ನು ಪೂರ್ಣವಾಗಿ ಗೊತ್ತು ಮಾಡುವುದು ಅಸಾಧ್ಯ. ಆದರೂ ಈಗ ನಾನು ಜಮಾಅತಿನ ಪ್ರಗತಿಯ ಕೆಲವು ಘಟನೆಗಳನ್ನು ವಿವರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯನ್ನು ಅಲ್ಲಾಹನು ಹೇಗೆ ಜನರ ಹೃದಯಗಳಲ್ಲಿ ಹಾಕುತ್ತಾನೆ ಎಂಬುದು ಈ ಘಟನೆಗಳಿಂದ ತಿಳಿದು ಬರುತ್ತದೆ.

ಕೆಲವರು ಅರಿವಿನ ಕೊರತೆಯ ಕಾರಣದಿಂದ ವಿರೋಧಿಸುತ್ತಾರೆ. ಅಂಥವರಿಗೆ ಸತ್ಯದ ಅರಿವಾಗುವಾಗ ಅವರು ಸತ್ಯವನ್ನು ಸ್ವೀಕಾರ ಮಾಡುತ್ತಾರೆ. ಅಂಥಹ ಒಂದು ಘಟನೆಯನ್ನು ಕಾಂಗೋಕಂಶಾಸದ ಅಮೀರ್ ಸಾಹಿಬ್ ಬರೆಯುತ್ತಾರೆ: ಅಲ್ಲಿಯ ಒಂದು ಗ್ರಾಮದಲ್ಲಿ ತಬ್ಲೀಗ್ ವೇಳೆಯಲ್ಲಿ ಅಲ್ಲಿಯ ಲೋಕಲ್ ಇಮಾಮ್‌ನೊಂದಿಗೆ ಈಸಾ ಮಸೀಹ್‌ರ ಮರಣ ಮುಂತಾದ ವಿಷಯಗಳಲ್ಲಿ ನಮ್ಮ ಮುಅಲ್ಲಿಂ ಸಾಹಿಬ್‌ರು ಮಾತುಕತೆ ನಡೆಸಿದರು. ಈಸಾ ಮಸೀಹ್‌ರು ಜೀವಂತವಾಗಿರುವರು ಎಂಬ ವಿಶ್ವಾಸದಿಂದ ಹಝ್ರತ್ ಪೈಗಂಬರ್(ಸ)ರನ್ನು ಅವಮಾನಿಸಿದಂತೆ ಆಗುತ್ತದೆ ಎಂದು ಆ ಅಹ್ಮದಿಯೇತರ ಇಮಾಮಿಗೆ ಗೊತ್ತಾದಾಗ ಅವರು ಕೂಡಲೇ ಸತ್ಯವನ್ನು ಸ್ವೀಕಾರ ಮಾಡಿಕೊಂಡರು. ಅನಂತರ ಇಮಾಂ ಮಹ್‌ದಿಯ ಆಗಮನದ ವಿಷಯ ಕೂಡ ಅವರಿಗೆ ಮನವರಿಕೆಯಾಯಿತು. ಹೀಗೆ ಅವರು ತಮ್ಮ ಕುಟುಂಬದ ಆರು ಸದಸ್ಯರು ಮತ್ತು 21 ಶಿಷ್ಯರ ಜೊತೆಗೆ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದರು.

ಕೆಲವೆಡೆ ಅಹ್ಮದಿಯ್ಯತ್ ಸ್ವೀಕಾರಕ್ಕಾಗಿ ಅಲ್ಲಾಹನು ಸ್ವತಃ ನೆಲವನ್ನು ತಯಾರು ಮಾಡುತ್ತಾನೆ. ಗಿನಿಕನಾಕುರಿಯ ಮುಬಲ್ಲಿಗ್ ಬರೆಯತ್ತಾರೆ: ಒಂದು ಗ್ರಾಮದಲ್ಲಿ ತಬ್ಲೀಗ್ ಮಾಡಿದಾಗ ಅಲ್ಲಿಯ ಓರ್ವ ಹಿರಿಯ ವ್ಯಕ್ತಿ ಹೇಳಿದರು: ನಾನು ನನ್ನ ತಾತರಿಂದ ಮಹ್‌ದಿ ಎಂಬ ಪದವನ್ನು ಬಹಳಷ್ಟು ಸಲ ಆಲಿಸಿದ್ದೇನೆ. ಆದರೆ ಅದರ ವಿಶದವಾದ ವಿವರಣೆ ಗೊತ್ತಿರಲಿಲ್ಲ. ಇಂದು ನೀವು ಅದನ್ನು ವಿವರಿಸಿದ್ದೀರಿ. ಆದ್ದರಿಂದ ನಾನು ಅಹ್ಮದಿಯ್ಯತ್ ಸ್ವೀಕಾರ ಮಾಡುತ್ತೇನೆ. ಅನಂತರ ಅವರು ಅಹ್ಮದಿಯ್ಯತ್ ಸ್ವೀಕಾರ ಮಾಡಲು ಗ್ರಾಮವಾಸಿಗಳನ್ನು ಉಪದೇಶಿಸಿದರು. ಅದರ ಪರಿಣಾಮವಾಗಿ ಅಲ್ಲಿನ ಇಮಾಂ ಸಮೇತ ಅನೇಕ ಜನರು ಬೈಅತ್ ಮಾಡಿದರು.

ಅದೇ ರೀತಿಯಲ್ಲಿ ಗೇಂಬಿಯದ ಮುಬಲ್ಲಿಗ್ ಇಂಚಾರ್ಜ್ ಬರೆಯತ್ತಾರೆ: ಅಲ್ಲಿಯ ಒಂದು ಗ್ರಾಮಕ್ಕೆ ತಬ್ಲೀಗಿನ ಸಂಘ ಹೋದಾಗ ಅವರು ಇತರ ಮಾತುಗಳ ಜೊತೆಗೆ ಬೈಅತ್ತಿನ ಹತ್ತು ನಿಬಂಧನೆಗಳನ್ನು ಓದಿ ಹೇಳಿದರು. ಇವುಗಳು ನೈಜವಾದ ಇಸ್ಲಾಮಿನ ಸಂಗತಿಗಳಾಗಿವೆ ಎಂದು ನಿಬಂಧನೆಗಳನ್ನು ಆಲಿಸಿದಾಗ ಆ ಗ್ರಾಮದ ವಿವೇಕವಂತರಿಗೆ ಗೊತ್ತಾಯಿತು. ನಾವು ಇಸ್ಲಾಮಿನ ಈ ಸುಂದರ ಪಾಠಗಳನ್ನು ಮೊದಲ ಬಾರಿಗೆ ಆಲಿಸಿದ್ದೇವೆ ಎಂದು ಗ್ರಾಮವಾಸಿಗಳು ಒಪ್ಪಿಕೊಂಡರು. ಹೀಗೆ ಪ್ರಶ್ನೋತ್ತರದ ದೀರ್ಘವಾದ ಸೆಶನಿನ ನಂತರ ಇನ್ನೂರರಷ್ಟು ಜನರು ಅಹ್ಮದಿಯ್ಯತನ್ನು ಪ್ರವೇಶಿಸಿಕೊಂಡರು.

ನಂತರ ಆಫ್ರಿಕದ ನಮ್ಮ ಓರ್ವ ಮುಬಲ್ಲಿಗ್ ಸಾಹಿಬ್ ಇದ್ದಾರೆ, ಅವರು ಬರೆಯುತ್ತಾರೆ ತಬ್ಲೀಗ್‌ನ ಕ್ಷೇತ್ರದಲ್ಲಿ ಕೆಲವೊಮ್ಮೆ ಬಾಹ್ಯವಾಗಿ ಸಣ್ಣ ಘಟನೆಗಳು ಎಂದು ಕಂಡುಬರುತ್ತವೆ ಆದರೆ ವಾಸ್ತವವಾಗಿ ಹಿನ್ನೆಲೆಯಲ್ಲಿ ಸರ್ವಶಕ್ತನಾದ ಅಲ್ಲಾಹನ ಬೆಂಬಲವು ಕೆಲಸ ಮಾಡುತ್ತಿರುತ್ತದೆ. ನಮ್ಮ ತಬ್ಲೀಗಿನ ತಂಡವು ಜಿಲ್ಲಾ ಕೇಂದ್ರವಾಗಿರುವ ಕೌಂಟಿಯ ಪ್ರಮುಖ ಪಟ್ಟಣವಾದ 'ಬಾವಾ' ದಲ್ಲಿ ಬೋಧಿಸಲು ಕಾರ್ಯಕ್ರಮವನ್ನು ಆಯೋಜಿಸಲು ಯೋಜನೆಯನ್ನು ರೂಪಿಸುತ್ತಿತ್ತು. ಅವರು ಹೇಳುತ್ತಾರೆ ನಾವು ಮಸೀದಿಯಲ್ಲಿ ಕುಳಿತಿದ್ದಾಗ ಅಷ್ಟರಲ್ಲೇ ಅದೇ ಊರಿನ ನಾಲ್ಕು ಜನರ ಒಂದು ತಂಡವು ನಮ್ಮನ್ನು ಭೇಟಿ ನೀಡಲು ಬಂದಿತು. ಅವರಲ್ಲಿ ಊರಿನ ಮಹಿಳಾ ಸಂಘಟನೆಯ ಅಧ್ಯಕ್ಷೆಯಾಗಿದ್ದ ಮಹಿಳೆಯೂ ಸೇರಿದ್ದರು. ನಿಮ್ಮನ್ನು ಆಹ್ವಾನಿಸಲು ನಾವು ಬಂದಿದ್ದೇವೆ ಎಂದು ಆ ತಂಡದ ಸದಸ್ಯರು ಹೇಳಿದರು. ನೀವು ನಮ್ಮ ಪ್ರದೇಶಕ್ಕೆ ಬಂದು ಅಹ್ಮದಿಯಾ ಜಮಾಅತ್‌ನ ಸಂದೇಶವನ್ನು ತಿಳಿಸಬೇಕು ಏಕೆಂದರೆ ನಿಮ್ಮ ಜಮಾಅತ್ ವಿಶೇಷವಾಗಿ ಮಕ್ಕಳಿಗೆ ಪವಿತ್ರ ಖುರ್‌ಆನ್ ಬೋಧಿಸಲು ಮತ್ತು ಕಲಿಸಲು ವ್ಯವಸ್ಥೆ ಮಾಡುತ್ತದೆ ಎಂದು ನಮಗೆ ತಿಳಿದು ಬಂದಿದೆ. ಹಾಗಾಗಿ ಮರುದಿನ ನಾವು ಅಲ್ಲಿಗೆ ಹೋಗಲು ಯೋಜನೆ ಮಾಡಿದೆವು. ಅಲ್ಲಿಗೆ ತಲುಪಿದಾಗ ಜಮಾಅತ್‌ಮ ಪರಿಚಯವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಮೂಲ ಉದ್ದೇಶ ತಿಳಿಸಲಾಯಿತು ತದನಂತರ ಪ್ರಶ್ನೋತ್ತರದ ಒಂದು ಸುದೀರ್ಘ ಚರ್ಚೆಯು ಮುಂದುವರೆಯಿತು, ಅದರ ಕೊನೆಯಲ್ಲಿ ಗ್ರಾಮಸ್ಥರೆಲ್ಲರೂ ಇಂದಿನಿಂದ ನಾವು ಜಮಾಅತ್ ಪ್ರವೇಶಿಸುತ್ತೇವೆ ಎಂದು ನಿರ್ಧರಿಸಿದರು. ಅದರಂತೆ ಇಲ್ಲಿಯೂ ಹೊಸ ಜಮಾಅತ್ ಸ್ಥಾಪನೆಯಾಗಿ ಈ ಭಾಗದ ಮಕ್ಕಳನ್ನೆಲ್ಲ ಒಟ್ಟುಗೂಡಿಸಿ ಇಂದಿನಿಂದ ಇವರೆಲ್ಲರು ಜಮಾಅತ್‌ನ ಮಕ್ಕಳು ಎಂದು ನಮ್ಮ ಮುಂದಿಟ್ಟರು. ಅವರಿಗೆ ಪವಿತ್ರ ಖುರ್‌ಆನ್ ಅನ್ನು ಹೇಗೆ ಕಲಿಸುವುದು ಎಂದು ನಮಗೆ ತಿಳಿಸಿ? ಆದ್ದರಿಂದ ನಾನು ಈ ಹುಡುಗರಲ್ಲಿ ಇಬ್ಬರನ್ನು ಪವಿತ್ರ ಖುರ್‌ಆನ್ ಕಲಿಸಲು ಆಯ್ಕೆ ಮಾಡಿದ್ದೇನೆ ಮತ್ತು ನಂತರ ಅವರು ತಮ್ಮ ಮಸೀದಿಗೆ ಹಿಂತಿರುಗಿ ತಮ್ಮ ಪ್ರದೇಶದಲ್ಲಿ ಖುರ್‌ಆನ್‌ನ ತರಗತಿಗಳನ್ನು ನಡೆಸುವ ಮೂಲಕ ಉಳಿದ ಮಕ್ಕಳಿಗೆ ಕಲಿಸುತ್ತಾರೆ ಎಂದು ನಮ್ಮ ಮುರಬ್ಬಿ ಸಾಹಿಬ್ ಹೇಳುತ್ತಾರೆ. ಆ ಸಮಯದಲ್ಲಿ ಸರ್ವಜ್ಞನಾದ ಅಲ್ಲಾಹನು ನಮಗೆ ಸಹಾಯ ಮತ್ತು ಬೆಂಬಲವನ್ನು ನೀಡಿದನು. ಪಾಕಿಸ್ತಾನದಲ್ಲಂತೂ ನಮಗೆ ಪವಿತ್ರ ಖುರ್‌ಆನ್ ಓದುವುದು ಬಿಡಿ, ಆಲಿಸುವುದಕ್ಕೂ ನಿರ್ಬಂಧ ಹೇರಲಾಗುತ್ತದೆ. ಪವಿತ್ರ ಖುರ್‌ಆನ್ ಆಲಿಸಿದಕ್ಕೆ ಒಬ್ಬ ಅಹ್ಮದಿಯ ಮೇಲೆ ಮೊಕದ್ದಮೆ ಹೂಡಲಾಗಿದೆ ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡಿದ್ದಕ್ಕೆ ಒಬ್ಬ ಅಹ್ಮದಿಯ ಮೇಲೆ ಮೊಕದ್ದಮೆ ಹೂಡಲಾಗಿದೆ. ಇದಾಗಿದೆ ಆ ನಾಮಧಾರಿ ಮುಸ್ಲಿಮರ ಇಸ್ಲಾಂ. ಮತ್ತೊಂದೆಡೆ ಪವಿತ್ರ ಖುರ್‌ಆನ್ ಕಲಿಸಿ ಕೊಡಲಿಕ್ಕಾಗಿ ಜನರು ತಮ್ಮ ಮಕ್ಕಳನ್ನು ಜಮಾಅತಿಗೆ ಒಪ್ಪಿಸುತ್ತಿದ್ದಾರೆ. ಏಕೆಂದರೆ ಅಹ್ಮದಿಯಾ ಜಮಾಅತ್ ಮಾತ್ರವೇ ಪವಿತ್ರ ಖುರ್‌ಆನಿನ ಸರಿಯಾದ ಅರಿವನ್ನು ಹೊಂದಿದೆ.

ಕೆಲವರು ಅಹ್ಮದಿಯಾಗುತ್ತಾರೆ ಮತ್ತು ನಂತರ ಪ್ರಲೋಭನೆಗೆ ಒಳಗಾಗುತ್ತಾರೆ ಅಥವಾ ಭಯದಿಂದ ಅಹ್ಮದಿಯತ್ತನ್ನು ತೊರೆಯುತ್ತಾರೆ ಮತ್ತು ನಂತರ ಅವರು ಇಲ್ಲಿ ಜಮಾಅತ್ ಅನ್ನು ನಾಶಮಾಡುತ್ತಾರೆ ಎಂದು ಭಾವಿಸುತ್ತಾರೆ, ಆದರೆ ಸರ್ವಶಕ್ತನಾದ ಅಲ್ಲಾಹನು ಅವರ ಆಲೋಚನೆಗಳನ್ನು ಹಿಮ್ಮೆಟ್ಟಿಸುತ್ತಾರೆ ಮತ್ತು ಜಮಾಅತ್ ಬೆಳೆಯುತ್ತದೆ. ವಾಗ್ದಾನದಂತೆ ನಡೆಯುತ್ತದೆ. ಐವರಿ ಕೋಸ್ಟ್ ಮುನಲ್ಲಿಗ್ ಒಬ್ಬರು ಓಮೆ ಪ್ರದೇಶದಲ್ಲಿ ಕ್ರೆಯೌಕೌ ಎಂಬ ಒಂದು ಸ್ಥಳವಿದೆ ಎಂದು ಬರೆಯುತ್ತಾರೆ, ಅಲ್ಲಿ ಹೆಚ್ಚಿನವರು 2008 ರಲ್ಲಿ ಜಮಾಅತ್ ಅನ್ನು ಸೇರಿರುವರು. ಆಗ ಅಲ್ಲೊಂದು ಪುಟ್ಟ ಮಸೀದಿ ನಿರ್ಮಾಣವಾಗಿತ್ತು. ಜನರು ಸ್ವಂತವಾಗಿ ನಿರ್ಮಿಸುತ್ತಿದ್ದರು. ಅದನ್ನು ಜನ ಜಮಾಅತ್‌ಗೆ ಅರ್ಪಿಸಿದ್ದರು. ಜಮಾಅತ್ ಈ ಮಸೀದಿಯನ್ನು ಪೂರ್ಣಗೊಳಿಸಿತು, ಆದರೆ ಸ್ವಲ್ಪ ಸಮಯದ ನಂತರ, ಬೈಅತ್ ಮಾಡಿದ ನಂತರ ಜಮಾಅತ್‌ಗೆ ಸೇರ್ಪಡೆಯಾಗಿದ್ದ ಸ್ಥಳೀಯ ಇಮಾಮ್‌ನ ಮನಸ್ಸಿನಲ್ಲಿ ಕೊರತೆ ಉಂಟಾಗಿ ಜಮಾತ್‌ನಿಂದ ಬೇರ್ಪಟ್ಟನು ಮತ್ತು ಮಸೀದಿಯನ್ನು ವಶಪಡಿಸಿಕೊಂಡನು. ನಂತರ ಅವನು ಜಮಾಅತ್ ತೊರೆಯಲು ಜನರನ್ನು ದಾರಿ ತಪ್ಪಿಸಿದನು, ಆದರೆ ಅಲ್ಲಾಹನ ಕೃಪೆಯಿಂದ ಜನರು ಅಹ್ಮದಿಯತ್ತಿನಲ್ಲಿ ದೃಢವಾಗಿ ನೆಲೆನಿಂತರು. ಮೌಲ್ವಿಗಳು ಮಸೀದಿಯನ್ನು ಆಕ್ರಮಿಸಿಕೊಂಡಾಗ, ಈ ಜನರು ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಶೀಟ್‌ಗಳು ಮತ್ತು ಮರವನ್ನು ಸಂಗ್ರಹಿಸಿ ತಾತ್ಕಾಲಿಕವಾಗಿ ಮಸೀದಿಯಂತಹ ಶೆಡ್ ಮಾಡಿ ಅಲ್ಲಿ ನಮಾಝನ್ನು ನಿರ್ವಹಿಸಲು ಪ್ರಾರಂಭಿಸಿದರು, ಜುಮುಅ ಕೂಡ ಪ್ರಾರಂಭವಾಯಿತು ಮತ್ತು ನಂತರ ಯಾರೂ ಸಹ ನಾವು ಒಂದು ಘನ ಮಸೀದಿಯನ್ನು ಬಿಟ್ಟು ಬಂದಿದ್ದೇವೆ ಎಂದು ಅದರ ಬಗ್ಗೆ ಕಾಳಜಿ ವಹಿಸಲಿಲ್ಲ. ಆದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಒಲವು ತೋರಿದನು ಮತ್ತು ಈ ವರ್ಷದಲ್ಲಿ, ಜಮಾಅತ್ ಅಲ್ಲಿ ಸುಂದರವಾದ ಎರಡು ಅಂತಸ್ತಿನ ಮಸೀದಿಯನ್ನು ನಿರ್ಮಿಸಲು ಸಾಧ್ಯವಾಯಿತು, ಇದು ಗುಮ್ಮಟಗಳು ಮತ್ತು ಮಿನಾರ್‌ಗಳನ್ನು ಹೊಂದಿದೆ ಮತ್ತು ಅಹ್ಮದಿಯರಲ್ಲದ ಇಮಾಮ್ ಆಕ್ರಮಿಸಿಕೊಂಡಿರುವ ಮಸೀದಿಗಿಂತ ಅನೇಕ ಪಟ್ಟು ದೊಡ್ಡದಾಗಿದೆ. ಆ ಪ್ರದೇಶದಲ್ಲಿ ಸುಂದರವಾದ ಮಸೀದಿಯನ್ನು ನಿರ್ಮಿಸಲಾಯಿತು.

ಪಾಕಿಸ್ತಾನದಲ್ಲಿಯೂ ಒಂದೆಡೆ ನಮ್ಮ ಮಿನಾರುಗಳನ್ನು ಕೆಡವಲಾಗುತ್ತಿದೆ. ಮಸೀದಿಗಳ ಕಮಾನುಗಳನ್ನು ಕೆಡವಲಾಗುತ್ತಿದೆ. ಮತ್ತೊಂದೆಡೆ, ಸರ್ವಶಕ್ತನಾದ ಅಲ್ಲಾಹನು ನಮಗೆ ಇತರ ಸ್ಥಳಗಳಲ್ಲಿ ಸುಂದರವಾದ ಮಸೀದಿಗಳನ್ನು ನೀಡುತ್ತಿದ್ದಾನೆ ಮತ್ತು ಅವುಗಳನ್ನು ಹೇರಳವಾಗಿ ನೀಡುತ್ತಿದ್ದಾನೆ.

ಚಾಡ್ ಆಫ್ರಿಕಾದ ದೇಶವಾಗಿದ್ದು, ವಿರೋಧಿಗಳ ಪ್ರಯತ್ನಗಳ ವಿರುದ್ಧ ಸರ್ವಶಕ್ತನಾದ ಅಲ್ಲಾಹನು ಹೇಗೆ ಸಹಾಯ ಮಾಡುತ್ತಾನೆ. ಎಂಬುದರ ಬಗ್ಗೆ ಅಲ್ಲಿನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ ಜಮಾಅತ್‌ನ ಮೊದಲ ಮಸೀದಿಯನ್ನು ಮಾರ್ಚ್ 2022 ರಲ್ಲಿ ಉದ್ಘಾಟಿಸಲಾಯಿತು. ಕಳೆದ ವರ್ಷದ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ಆಫ್ರಿಕದ ದೇಶವಾದ ಚಾಡಿನ ರಾಜಧಾನಿಯಲ್ಲಿ ನಮ್ಮ ಮೊದಲ ಮಸೀದಿ ನಿರ್ಮಾಣವಾದಾಗ ಅಸೂಯೆಗಾರರು ತೀವ್ರತರದ ವಿರೋಧ ಆರಂಭಿಸಿದರು. ಉದ್ಘಾಟನೆಯ ನಂತರ, ಜಮಾಅತ್ ಹೆಚ್ಚು ಜನಪ್ರಿಯವಾದಾಗ ಅಸೂಯೆ ಪಟ್ಟವರ ಸಂಖ್ಯೆಯು ಹೆಚ್ಚಾಗಲಾರಂಭಿಸಿತು ಮತ್ತು ಅವರ ಚಟುವಟಿಕೆಗಳು ಹೆಚ್ಚಾಗತೊಡಗಿದವು. ಮುರಬ್ಬಿ ಸಾಹಿಬ್ ಹೇಳುತ್ತಾರೆ: ನಮ್ಮ ಪ್ರದೇಶದ

ಕೆಲವು ಇಮಾಮರು, ನಾಮಧಾರಿ ಮೌಲವಿಗಳು ಅಹ್ಮದಿಯಾ ಮಸೀದಿಯನ್ನು ಮುಚ್ಚಬೇಕು ಎಂದು ಮಸೀದಿಗಳಲ್ಲಿ ಜಮಾಅತ್‌ನ ವಿರುದ್ಧ ಭಾಷಣಗಳನ್ನು ಮಾಡುತ್ತಿದ್ದರು. ಈ ನಿಟ್ಟಿನಲ್ಲಿ, ಅವರು ಜನರನ್ನು ಒಟ್ಟುಗೂಡಿಸಿ, ಚಾಡ್‌ನ ಇಸ್ಲಾಮಿಕ್ ಕೌನ್ಸಿಲ್‌ಗೆ ಹೋಗಿ, "ಅಹ್ಮದಿಯಾ ಜಮಾತ್‌ಗೆ ಮಸೀದಿ ನಿರ್ಮಿಸಲು ಏಕೆ ಅನುಮತಿ ನೀಡಿದ್ದೀರಿ ಮತ್ತು ಜುಮುಅ ನಮಾಝ್‌ಗೆ ಮಸೀದಿಯನ್ನು ಏಕೆ ತೆರೆಯಲಾಗಿದೆ, ಈ ಮಸೀದಿಯನ್ನು ತಕ್ಷಣವೇ ಮುಚ್ಚಬೇಕು? ಇದರಿಂದಾಗಿ ನಮ್ಮ ಪ್ರದೇಶದಲ್ಲಿ ಪ್ರಲೋಭನೆ ಸೃಷ್ಟಿಯಾಗುತ್ತಿದೆ. ಇಸ್ಲಾಮಿಕ್ ಕೌನ್ಸಿಲ್‌ನವರು ಹೀಗೆ ಹೇಳಿದರು ಅಹ್ಮದೀಯರು ಆರಾಧನೆ ಮಾಡುವುದು ಅವರ ಹಕ್ಕಾಗಿದೆ, ಅಲ್ಲಾಹನ ಮನೆಯಾಗಿರುವ ಮಸೀದಿಯನ್ನು ನಾವು ಹೇಗೆ ಮುಚ್ಚಬಹುದು? ನಿಮಗೆ ಯಾವುದೇ ದುಷ್ಕೃತ್ಯದ ಭೀತಿ ಇದ್ದರೆ ಪೊಲೀಸರಿಗೆ ಹೋಗಿ ದೂರು ನೀಡಿ ಎಂದು ಹೇಳಿದರು. ಕನಿಷ್ಠ ಪಕ್ಷ ಅಲ್ಲಿನ ಅಲ್ಲಿಯ ಇಸ್ಲಾಮಿಕ ಸಮಿತಿಯುವರಿಗೆ ಕನಿಷ್ಠ ಪಕ್ಷ ಬುದ್ಧಿಯಿದೆ ಮತ್ತು ನ್ಯಾಯಪಾಲನೆ ಮಾಡುತ್ತಿದ್ದಾರೆ. ಪಾಕಿಸ್ತಾನದಲ್ಲಂತು ನ್ಯಾಯಾಧೀಶರು ಕೂಡ ಅಹ್ಮದಿಯಾ ಜಮಾಅತಿನ ವಿರುದ್ಧ ಹಗೆಯನ್ನು ಹೊಂದಿರುತ್ತಾರೆ. ತಮ್ಮ ಮಸೀದಿಗಳಲ್ಲಿ ಆರಾಧನೆ ಮಾಡಲು ಮತ್ತು ತಮ್ಮ ಆರಾಧಾನಾಲಯವನ್ನು ಮಸೀದಿ ಎಂದು ಹೇಳಲು ಕೂಡ ಅಹ್ಮದಿಯರಿಗೆ ಅಲ್ಲಿ ಅನುಮತಿಯಿಲ್ಲ. ಆದಾಗ್ಯೋ, ತದನಂತರ ಆ ಜನರು ಪೊಲೀಸ್ ಕೇಂದ್ರ ಕಚೇರಿಗೆ ತೆರಳಿ ನಮ್ಮ ಪ್ರದೇಶದಲ್ಲಿ ಕಿಡಿಗೇಡಿಗಳು ಸೃಷ್ಟಿಯಾಗುತ್ತಿದ್ದಾರೆ ಎಂದು ದೂರಿದರು. ಅಹ್ಮದೀಯರನ್ನು ಬಂಧಿಸಬೇಕು. ಅವರು ಹೊಸ ಧರ್ಮದೊಂದಿಗೆ ಬಂದಿದ್ದಾರೆ ಮತ್ತು ಅವರು ನೌಝು-ಬಿಲ್ಲಾಹ್ ಪವಿತ್ರ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರನ್ನು ಸಹ ನಂಬುವುದಿಲ್ಲ. ಪೋಲೀಸ್ ಅಧಿಕಾರಿ ಮುಬಲ್ಲಿಗ್ ಸಾಹಿಬ್ ಅವರನ್ನು ಕರೆದರು. ಜಮಾಅತ್‌ನ ನೋಂದಣಿ ಪ್ರತಿ ಹಾಗೂ ಮಸೀದಿ ನಿರ್ಮಿಸಲು ಅನುಮತಿ ನೀಡುವಂತೆ ಕೋರಿದರು. ಎಲ್ಲಾ ವಿಷಯಗಳು, ಎಲ್ಲಾ ದಾಖಲೆಗಳನ್ನು ಸಲ್ಲಿಸಲಾಯಿತು. ಆದರೂ ನೀವು ಹೋಗಿ ನಾನು ತನಿಖೆ ನಡೆಸಿ ನಿಮಗೆ ತಿಳಿಸುತ್ತೇನೆ ಎಂದು ಹೇಳಿದರು. ತದನಂತರ, ಈ ಪೋಲೀಸ್ ಅಧಿಕಾರಿ ನೆರೆಹೊರೆಯ ಮುಖ್ಯಸ್ಥರನ್ನು ಕರೆದು, ಅಹ್ಮದಿಯರು ನಿಮ್ಮ ನೆರೆಹೊರೆಯಲ್ಲಿ ಮಸೀದಿ ನಿರ್ಮಿಸಿದ್ದಾರೆ ಮತ್ತು ಹೊಸ ಧರ್ಮವನ್ನು ತಂದಿದ್ದಾರೆ ಮತ್ತು ಪವಿತ್ರ ಪ್ರವಾದಿ ಮುಹ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನಂಬುವುದಿಲ್ಲ ಎಂದು ಕೇಳಿದರು. ಅದಕ್ಕೆ ಅಂತಹದ್ದೇನೂ ಇಲ್ಲ ಎಂದು ಮುಖ್ಯಾಧಿಕಾರಿ ಉತ್ತರಿಸಿದರು. ನಾನೇ ಸ್ವತಃ ಜುಮುಅವನ್ನು ಅವರ ಮಸೀದಿಯಲ್ಲಿ ನಿರ್ವಹಿಸಿದ್ದೇನೆ ಮತ್ತು ಅವರು ಅನ್ಯ ಮುಸ್ಲಿಮರಂತೆ ಪ್ರಾರ್ಥಿಸುತ್ತಾರೆ ಮತ್ತು ನನಗೆ ಮೂರು ವರ್ಷಗಳಿಂದ ಅಹ್ಮದಿಯಾ ಜಮಾಅತ್ ತಿಳಿದಿದೆ ಮತ್ತು ಅವರು ಸಾರ್ವಜನಿಕ ಸೇವೆಯ ಮಹತ್ತರವಾದ ಕೆಲಸಗಳನ್ನು ಸಹ ಮಾಡುತ್ತಿದ್ದಾರೆ. ಆದರೆ, ಒಂದು ದಿನ ಪೊಲೀಸ್ ಅಧಿಕಾರಿ ನಮ್ಮ ಮಸೀದಿಗೆ ಬಂದರು ಮತ್ತು ಮಸೀದಿಯ ಹೊರಗೆ **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದ್ ರಸುಲುಲ್ಲಾಹ್** ಎಂದು ಬರೆದಿರುವುದನ್ನು ಕಂಡು ಆಶ್ಚರ್ಯಚಕಿತರಾದರು ಮತ್ತು ನೀವು ಮುಹಮ್ಮದ್(ಸ) ಅವರನ್ನು ನಂಬುತ್ತೀರಿ ಎಂದು ಹೇಳಿದರು. ಮಸೀದಿಯ ಹಾಲ್ ನೊಳಗೆ ಪವಿತ್ರ ಖುರ್‌ಆನ್‌ನ ವಚನಗಳನ್ನು ನೋಡಿ ಇನ್ನಷ್ಟು ಆಶ್ಚರ್ಯಚಕಿತರಾದರು. ಆಗ ಅವರು ನಿಮ್ಮ ಕಿಬ್ಲಾ ಕೂಡ ಒಂದೇ ಆಗಿದ್ದು, ಮಸೀದಿಯಲ್ಲಿನ ಜೋಡಣೆಯೂ ಮುಸ್ಲಿಮರ ಮಸೀದಿಗಳಂತೆಯೇ ಇದೆ ಎಂದು ಹೇಳಿದರು. ಹೊಸ ಧರ್ಮ ತಂದಿದ್ದಾರೆ ಎಂದು ನನಗೆ ಹೇಳಲಾಗಿದೆ. ಆದಾಗ್ಯೊ, ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಸುತ್ತಮುತ್ತಲಿನ ಅಹಮದೀಯರಲ್ಲದವರ ಮನೆಗಳನ್ನೂ ಅವರು ವಿಚಾರಿಸಿದರು. ಅದಕ್ಕೆ ಅವರೆಲ್ಲರು ಅವರಿಂದ ನಮಗೆ ಯಾವುದೇ ತೊಂದರೆ ಇಲ್ಲ ಎಂದು ಹೇಳಿದರು. ಈ ಜನರು ಪೊಲೀಸರೊಂದಿಗೆ ವಿಫಲವಾದಾಗ, ಅವರು ಇವರ ಮನೆಗಳಿಗೆ ಹೋಗಲು ಪ್ರಾರಂಭಿಸಿದರು. ಅಕ್ಕಪಕ್ಕದ ಮನೆಯವರಿಗೆ ಅವರನ್ನು ಇಲ್ಲಿಂದ ಹೊರ ಹಾಕುವಂತೆ ಗಲಾಟೆ ಮಾಡುವಂತೆ ಕೇಳಿಕೊಂಡಾಗ ಅವರು ಹೇಳಿದರು ಮಸೀದಿಯು ಲಲಾಹನೆ ಮನೆಯಾಗಿದೆ ಮತ್ತು ನಮಗೆ ಅವರಲ್ಲಿ ಇಸ್ಲಾಂ ಧರ್ಮಕ್ಕೆ ಚ್ಯುತಿ ಬರುವಂಥದ್ದು ಏನೂ ಕಾಣುತ್ತಿಲ್ಲ ಹಾಗಾಗಿ ಎಲ್ಲ ರೀತಿಯಲ್ಲೂ ಅವರು ಸೋತರು. ಹೀಗೆ ಅವರು ಎಲ್ಲಾ ವಿಷಯದಲ್ಲಿಯೂ ಸೋತು ಹೋದರು.

ಸರ್ವಶಕ್ತನಾದ ಅಲ್ಲಾಹನು ಹೇಗೆ ಜಮಾಅತ್‌ನಲ್ಲಿ ಪ್ರವೇಶಿಸಲು ಜನರ ಮನಸ್ಸಿನಲ್ಲಿ ಉತ್ತೇಜಿಸುತ್ತಾನೆ ಎಂಬುದರ ಬಗ್ಗೆ ಒಂದು ಘಟನೆಯನ್ನು ಬೆಲೀಝ್‌ನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಬೆಲೀಝ್ ಎಂಬುದು ಮಧ್ಯ ಅಮೆರಿಕದ ಒಂದು ದೇಶ ಎಂದು ಹೇಳಲಾಗುತ್ತದೆ. ಮೆಥೋಡಿಸ್ಟ್ ಚರ್ಚ್‌ನೊಂದಿಗೆ ಬಲವಾದ ಸಂಬಂಧ ಹೊಂದಿರುವ ಮಹಿಳೆಯೊಬ್ಬರು ನೂರ್ ಮಸೀದಿಯನ್ನು ನಿರ್ಮಿಸುವುದನ್ನು ನೋಡಿದಾಗ ಅಲ್ಲಾಹನು ಈ ಧರ್ಮವನ್ನು ಸ್ವೀಕರಿಸಬೇಕೆಂದು ಅವಳ ಹೃದಯದಲ್ಲಿ ಇರಿಸಿದನು. ಮಸೀದಿಯ ನಿರ್ಮಾಣ ಪೂರ್ಣಗೊಂಡು ಮಸೀದಿ ಉದ್ಘಾಟನೆಯಾದಾಗ ಅಲ್ಲಿಗೆ ಹೋಗಿ ಈ ಜಮಾಅತ್‌ನ ಭಾಗವಾಗಲು ದೇವರು ನನ್ನ ಹೃದಯದಲ್ಲಿ ಇರಿಸಿದ್ದಾನೆ ಎಂದು ಅವರು ತಮ್ಮ ಸ್ನೇಹಿತರಿಗೆ ಹೇಳಿದರು. ಅದಕ್ಕೆ ಅವರ ಸ್ನೇಹಿತರು ಹೇಳಿದರು: ನಿನ್ನ ಮನೆಯ ಹತ್ತಿರ ಇನ್ನೊಂದು ಮುಸ್ಲಿಂ ಮಸೀದಿ ಇದೆ ನೀನು ಮುಸಲ್ಮಾನನಾಗಬೇಕಾದರೆ ನೀನೂ ಅಲ್ಲಿಗೂ ಹೋಗಬಹುದು ಎಂದು. ಅದಕ್ಕೆ ಆ ಮಹಿಳೆ ಇಲ್ಲ ಎಂದು ಉತ್ತರಿಸಿದರು. ಅಹ್ಮದೀಯ ಜಮಾಅತ್ ಬಗ್ಗೆ ದೇವರು ನನ್ನ ಹೃದಯದಲ್ಲಿ ಇಟ್ಟಿದ್ದಾನೆ, ಅವರು ಸರಿಯಾದ ಜನರು ಮತ್ತು ನಾನು ಅವರೊಂದಿಗೆ ಇರಬೇಕು. ಹೀಗೆ ಮಸ್ಜಿದ್ ನೂರ್ ಗೆ ಬಂದು ಜಮಾಅತ್ ಗೆ ಪರಿಚಯವಾದಾಗ ದೇವರು ತನ್ನನ್ನು ಈ ಜಮಾಅತ್ ಗೆ ಕರೆತಂದಿದ್ದು ಹೇಗೆ ಎಂದು ಭಾವುಕಳಾದಳು. ನಾನು ನಿನ್ನ ಸಂದೇಶವನ್ನು ಭೂಮಿಯ ತುದಿಗಳಿಗೆ ಹರಡಿಸುತ್ತೇನೆ ಎಂದು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಪ್ರೇರೇಪಿಸಿದ್ದಾನೆ ಎಂದು ಮುರಬ್ಬಿ ಸಾಹಿಬ್ ಅವರಿಗೆ ಹೇಳಿದರು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್‌ಗಾಗಿ ಅದೇ ರೀತಿಯಲ್ಲಿ ಕೆಲಸ ಮಾಡುತ್ತಾನೆ. ಹೀಗೆ ಅವರು ಮಸೀದಿಗೆ ಬಂದ ನಂತರ ಮತ್ತು ಇಸ್ಲಾಹ್ ಅಹ್ಮದೀಯತ್‌ನ ಬೋಧನೆಗಳ ಬಗ್ಗೆ ತಿಳಿದುಕೊಂಡ ನಂತರ ಅವರು ಕೆಲವೇ ದಿನಗಳಲ್ಲಿ ಬೈಅತ್ ಮಾಡಿ ಜಮಾಅತ್‌ಗೆ ಸೇರ್ಪಡೆಯಾದರು.

ಕೆಲವೊಮ್ಮೆ ಕೆಲವು ಜನರು ತಪ್ಪು ತಿಳುವಳಿಕೆ ಅಥವಾ ಜನರ ಮಾತುಗಳಿಂದ ವಿರೋಧಿಸುತ್ತಾರೆ, ಆದರೆ ಅವರು ಪರಿಶುದ್ಧ ಸ್ವಭಾವದವರಾಗಿರುತ್ತಾರೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹೇಗೆ ಮಾರ್ಗದರ್ಶನ ನೀಡುತ್ತಾನೆ ಎಂಬ ಘಟನೆ, ಗ್ಯಾಂಬಿಯಾದ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್ ಬರೆಯುತ್ತಾರೆ ಜಮಾರಾ ಜಿಲ್ಲೆಯು ಇದು ಪ್ರದೇಶವಾಗಿದೆ. ಅಲ್ಲಿ ಅವರು ಹೊಸದಾಗಿ ನಿರ್ಮಿಸಲಾದ ಮಸೀದಿಯ ಬಾಗಿಲು ಮತ್ತು ಕಿಟಕಿಗಳಿಗೆ ಗಾಜುಗಳನ್ನು ಖರೀದಿಸುತ್ತಿದ್ದರು. ಹಾಗಾಗಿ ಗಾಜು ಕತ್ತರಿಸುವ ವಿಷಯಕ್ಕೆ ಬಂದರೆ ಅಬೂಬಕರ್ ಸಾಬಲಿ ಸಾಹೇಬರು ಈ ಕೆಲಸದಲ್ಲಿ ನಿಪುಣರಾಗಿದ್ದವರು. ಮಸೀದಿಗೆ ಗಾಜನನ್ನು ಖರೀದಿಸಲಾಗಿದೆ ಎಂದು ಹೇಳಿದರು, ಅದಕ್ಕೆ ಅವರು ಇದು ಮಸೀದಿಯ ಕೆಲಸವಾಗಿದ್ದರಿಂದ ನಾನು ಕಡಿಮೆ ಕೂಲಿ ತೆಗೆದುಕೊಳ್ಳುತ್ತೇನೆ ಎಂದು ತಮ್ಮ ವೇತನವನ್ನು ಕಡಿಮೆ ಮಾಡಿದರು. ಗಾಜಿನ ಕಿಡಕಿಗಳನ್ನು ಅಳವಡಿಸಲು ಹೊರಟಿದ್ದ ವ್ಯಕ್ತಿಯೊಂದಿಗೆ ನಾವು ಅಲ್ಲಿಗೆ ತಲುಪಿದಾಗ, ಅಂತಹ ದೂರದ ಪ್ರದೇಶದಲ್ಲಿ ಇಷ್ಟು ಸುಂದರವಾದ ಮಸೀದಿಯನ್ನು ಕಂಡು ತುಂಬಾ ಸಂತೋಷವಾಯಿತು ಎಂದು ಹೇಳಿದರು, ಆದರೆ ಅದು ಅಹ್ಮದಿ ಮುಸ್ಲಿಮರ ಮಸೀದಿ ಎಂದು ತಿಳಿದಾಗ ಅವರಿಗೆ ತುಂಬಾ ಬೇಸರವಾಯಿತು. ಅವನು ಕೋಪಗೊಂಡು ಆ ಗಾಜುಗಳನ್ನು ಒಡೆದು ಹಾಕಿದನು ಆ ಗಾಜನ್ನು ಒಡೆಯುವಾಗ ಆತನು ಗಾಯಗೊಂಡನು ಆದರೆ ಅಲ್ಲಾಹನು ಆತನಿಗೆ ಹೇಗೆ ಮಾರ್ಗದರ್ಶನ ನೀಡಿದನು ಎಂದರೆ. ಅವರು ಹೇಳುತ್ತಾರೆ: ರಾತ್ರಿಯಲ್ಲಿ ನಾನು ಕಿರುಚುತ್ತಾ ಸಮುದ್ರದಲ್ಲಿ ಮುಳುಗುತ್ತಿರುವಂತೆ ಕನಸು ಕಂಡೆ ಮತ್ತು ಸಹಾಯದ ಭರವಸೆ ಇಲ್ಲದಿದ್ದಾಗ, ಅವನನ್ನು ರಕ್ಷಿಸಲು ದೋಣಿ ಒಂದನ್ನು ತನ್ನ ಕಡೆ ಬರುವುದನ್ನು ಅವರು ನೋಡಿದರು ಮತ್ತು ಆ ದೋಣಿಯಲ್ಲಿ ಅವರು ಅಮೀರ್ ಜಮಾಅತ್ ಹಾಗೂ ಈ ಮುಬಲ್ಲಿಗ್ ಸಾಹಿಬ್ ಅವರನ್ನು ನೋಡಿದನು. ಮರುದಿನ ಬೆಳಿಗ್ಗೆ, ಅಂದರೆ ಶುಕ್ರವಾರ, ಅವರು ಮಿಷನ್ ಹೌಸ್‌ಗೆ ಬಂದು ಬೈಅತ್ ಮಾಡಿದ ನಂತರ ಅಹ್ಮದೀಯ ಜಮಾಅತ್‌ಗೆ ಸೇರಿಕೊಂಡರು.

ಅದೇ ರೀತಿ, ತಾಂಜಾನಿಯಾದಿಂದ ಅಹ್ಮದೀಯ ಸ್ವೀಕಾರದ ಕುರಿತು ಒಂದು ಘಟನೆ ಹೀಗಿದೆ. ಸೆಮಿಯೊ ರೀಜನ್‌ನ ಒಂದು ಜಮಾಅತ್ ಮವಾಬೇಮಾ (Mwabuma) ಎಂದಿದೆ. ಅಲ್ಲಿ ಮುಅಲ್ಲಿಮ್ ಸಾಹೇಬರು ತಬ್ಲೀಗ್ ಪ್ರಾರಂಭಿಸಿದರು. ಸ್ಥಳೀಯ ಜನರು ಮಸೀದಿ ಮತ್ತು ಮಿಷನ್ ಹೌಸ್ ನಿರ್ಮಿಸಲು ನಿವೇಶನ ಪಡೆಯಲು ಬಯಸಿದಾಗ, ಎಲ್ಲರೂ ಉಲ್ಲೇಖಿಸಿದ ಬೆಲೆ ತುಂಬಾ ಹೆಚ್ಚಾಗಿತ್ತು. ವಿಚಾರಿಸಿದಾಗ ತಿಳಿದು ಬಂದ ವಿಷಯವೇನೆಂದರೆ ಸ್ಥಳೀಯ ಪಾದರಿ ಸಾಹೇಬರು ನಮ್ಮ ವಿರುದ್ಧ ಪ್ರಚಾರ ನಡೆಸುತ್ತಿದ್ದಾರೆ, ಆದ್ದರಿಂದ ಯಾರೂ ಸಹ ಮಸೀದಿ ನಿರ್ಮಿಸಲು ಭೂಮಿಯನ್ನು ಮಾರಾಟ ಮಾಡಬಾರದು, ಏಕೆಂದರೆ ಅವರು ಮಾಠಮಂತ್ರ ಮಾಡುತ್ತಾರೆ ಮತ್ತು ಜಿನ್ನ್ ಹೊಂದಿದ್ದಾರೆ ಮತ್ತು ಪವಿತ್ರ ಖುರ್‌ಆನ್ ಮೂಲಕ ಅವರು ಬಯಸಿದವರನ್ನು ಕೊಲ್ಲುತ್ತಾರೆ ಮತ್ತು ಅದು ಸಂಬವಿಸುವುದು ತಿಳಿಯುವುದೂ ಇಲ್ಲ. ಈ ಭಯದಿಂದ ನಮಗೆ ಮಸೀದಿ

ಕಟ್ಟಲು ಯಾರೂ ಜಾಗ ಕೊಡುತ್ತಿರಲಿಲ್ಲ. ಅದು ಕ್ರಿಶ್ಚಿಯನ್ ಪ್ರದೇಶವಾಗಿತ್ತು. ಇದಕ್ಕೆ ಮುಅಲ್ಲಿಮ್ ಸಾಹೀಬರೆಲ್ಲರು ಮನೆ ಮನೆಗೆ ತೆರಳಿ ಈ ಜನರ ಪಿಸುಮಾತುಗಳನ್ನು ಕೊನೆಗೊಳಿಸಿದರು. ಜನರ ಅಭಿಪ್ರಾಯವನ್ನು ಬದಲಾಯಿಸಲು ಪ್ರಯತ್ನಿಸಿದರು. ಕೆಲವೇ ತಿಂಗಳುಗಳಲ್ಲಿ, ಒಬ್ಬ ಯುವಕ ತನ್ನ ಒಂದು ಎಕರೆ ಜಾಗವನ್ನು ನಮಗೆ ಕೊಡಲು ಮುಂದಾದನು. ಅವನಿಂದ ಜಮಾಅತ್ ಆತನ ನಿವೇಶನವನ್ನು ಖರೀದಿಸಿದರು. ಈ ಮಸೀದಿಯ ನಿವೇಶನವನ್ನು ಮಾರಾಟ ಮಾಡಿದ ನಂತರ ತನಗೆ ಅಪಾರವಾದ ಅನುಗ್ರಹವು ಲಭಿಸಿದೆ ಎಂದು ಈ ಯುವಕ ಹೇಳಿದನು. ಅನೇಕ ವರ್ಷಗಳಿಂದ ಸಾಲವನ್ನು ಮರುಪಾವತಿಸದೆ ಮತ್ತು ಅವನ ಅನೇಕ ಕೆಲಸಗಳು ಸ್ಥಗಿತಗೊಂಡಿದ್ದರಿಂದ, ನಿವೇಶನವನ್ನು ಮಾರಾಟ ಮಾಡಿದ ಕೆಲವು ದಿನಗಳ ನಂತರ, ಅವನೇ ಎಲ್ಲಾ ಹಣವನ್ನು ಮತ್ತು ತನ್ನ ಎಲ್ಲಾ ಸಾಲವನ್ನು ಹಿಂದಿರುಗಿಸಿದನು ಎಂದು ಅವನು ಹೇಳುತ್ತಾನೆ. ಆದಾಗ್ಯೂ, ಇದರಿಂದ ಪ್ರಭಾವಿತರಾಗಿ, ಅವರು ತಮ್ಮ ಕುಟುಂಬದೊಂದಿಗೆ ಅಹ್ಮದಿಯಾದರು. ತದನಂತರ, ಅಹ್ಮದೀಯತ್‌ನ ಸ್ವೀಕಾರದ ಅಲೆ ಎದ್ದಿದೆ ಎಂದು ಹೇಳಲಾಗುತ್ತದೆ, ಈ ಪ್ರದೇಶದ ನೂರಾರು ಜನರು ಬೈಅತ್ ಮಾಡಿ ಜಮಾತ್‌ಗೆ ಸೇರಿದರು ಮತ್ತು ಸರ್ವಶಕ್ತನಾದ ಅಲ್ಲಾಹನು ಅಲ್ಲಿ ದೊಡ್ಡ ಮಸೀದಿ ಮತ್ತು ಮಿಷನ್ ಹೌಸ್ ಅನ್ನು ನಿರ್ಮಿಸಲು ಜಮಾತ್‌ಗೆ ಅವಕಾಶ ಕಲ್ಪಿಸಿಕೊಟ್ಟನು.

ಅಲ್ಲಾಹನು ಯಾರಿಗೆ ಸನ್ಮಾರ್ಗ ನೀಡಲು ಬಯಸುತ್ತಾನೋ ಅವರಿಗೆ ಸನ್ಮಾರ್ಗದ ಏರ್ಪಾಡು ಕೂಡ ಅವನು ಅದ್ಭುತಕರವಾದ ವಿಧದಲ್ಲಿ ಮಾಡುತ್ತಾನೆ.

ಆಫ್ರಿಕದ ಸೌತೋಮ ಪ್ರದೇಶದ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ: ಮೊರೋಕೊದಿಂದ ಸೌತೋಮಕ್ಕೆ ಬಂದಿದ್ದ ಒಬ್ಬ ಯಾತ್ರಿಕ ನಮ್ಮ ಮಸೀದಿಯಲ್ಲಿ ಜುಮಾ ನಮಾಝ್ ನಿರ್ವಹಿಸಿದರು. ಅಲ್ಲಿ ಅವರು ಅರಬಿ ಭಾಷೆಯಲ್ಲಿದ್ದ ಸಿರ್ರುಲ್‌ಖಿಲಾಫ ಮತ್ತು 'ಧರ್ಮದ ಹೆಸರಲ್ಲಿ ರಕ್ತಪಾತ' ಎಂಬ ಗ್ರಂಥಗಳನ್ನು ಓದಿದರು. ಎಂ.ಟಿ.ಎ. ಅಲ್ ಅರಬಿಯದ ಕೆಲವು ಕಾರ್ಯಕ್ರಮಗಳನ್ನು ನೋಡಿದರು. ಜಾಗತಿಕ ಬೈಅತ್ತಿನ ರಿಕಾರ್ಡಿಂಗ್ ನೋಡಿದರು. ಅನಂತರ ಕೆಲವು ಕಾಲದ ನಂತರ ಪುನಃ ಬಂದು ಬೈಅತ್ ಫಾರಂ ಪಡೆದುಕೊಂಡು ಫಾರಂ ಭರ್ತಿ ಮಾಡಿದರು. ಕೆಲವು ದಿನಗಳು ಯೋಚಿಸಿ, ದುಆ ಮಾಡಿದ ನಂತರ ಬೈಅತ್ ಮಾಡಿರಿ ಎಂದು ಮುಬಲ್ಲಿಗ್ ಸಾಹಿಬ್ ಅವರೊಡನೆ ಹೇಳಿದರು. ಆದರೆ ಅವರು ಹೇಳಿದರು: ನಾನು ರಾತ್ರಿಯಿಡೀ ದುಆಗಳನ್ನು ಮಾಡಿದ್ದೇನೆ. ಇಮಾಮರಲ್ಲಿ ಬೈಅತ್ ಮಾಡದೇ ನಾನು ಮೃತಪಟ್ಟರೆ ನನ್ನ ಮರಣ ಜಹಾಲತಿನ ಮರಣವಾಗುವುದು. ಹೀಗೆ ಹೇಳಿಕೊಂಡು ಅವರು ಕೂಡಲೇ ಬೈಅತ್ ಮಾಡಿದರು. ಮೊರೊಕೊದಲ್ಲಿ ಅಹ್ಮದಿಯರು ಇರುವರು, ಅಲ್ಲಿ ನಮ್ಮ ಜಮಾಅತ್ ಸಹ ಇದೆ. ಆದರೆ ಅವರಿಗೆ ಅಲ್ಲಿ ಜಮಾಅತಿನ ಪರಿಚಯವಾಗಲಿಲ್ಲ. ಅಲ್ಲಾಹನು ಅವರನ್ನು ದೂರದ ಪ್ರದೇಶವಾದ ಆಫ್ರಿಕಕ್ಕೆ ಕಳುಹಿಸಿದನು ಮತ್ತು ಅಲ್ಲಿ ಅವರ ಸನ್ಮಾರ್ಗದ ಏರ್ಪಾಡನ್ನು ಮಾಡಿದನು.

ಉಜ್ಬೇಕಿಸ್ತಾನದ ವ್ಯಕ್ತಿ ಆಲಿಮ್ ಬಾಬಾಯೋವ್ ಸಾಹಿಬ್ ಇದ್ದಾರೆ. ಅವರು ಹೇಳುತ್ತಾರೆ ನನ್ನ ಜನನವು ಒಂದು ಮುಸ್ಲಿಂ ಕುಟುಂಬದಲ್ಲಿ ಆಗಿದೆ. ನನಗೆ ಮೂವತ್ತೊಂದು ವರ್ಷ. ನಾನು ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ನಿಂದ ಬಂದವನು. ನಾನು ಪವಿತ್ರ ಖುರ್‌ಆನ್ ಕಲಿಯಲು ಶಿಕ್ಷಕರನ್ನು ಹುಡುಕುತ್ತಿದ್ದೆ ಆಗ ನಾನು ಬಾಬರ್ ಜಾನ್ ಅನ್ನು ಭೇಟಿಯಾದೆ. ಅವರಿಂದ ನಿಜವಾದ ಇಸ್ಲಾಂ ಬಗ್ಗೆ ಕೇಳಿದೆ. ಅವರಿಂದ ಪವಿತ್ರ ಖುರ್‌ಆನ್ ಕಲಿತೆ. ಅವರು ನನಗೆ ಈ ಸತ್ಯವನ್ನು ಕಂಡುಕೊಳ್ಳಲು ನನಗೆ ಸಹಾಯ ಮಾಡಿದರು. ಹಾಗಾಗಿ ನಾನು ಬೈಅತ್ ಮಾಡುವ ಮೂಲಕ ಜಮಾಅತ್ ಸೇರಿಕೊಂಡೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಪವಿತ್ರ ಖುರ್‌ಆನ್ ಬೋಧಿಸಲು ಅಹ್ಮದಿ ಶಿಕ್ಷಕರ ವ್ಯವಸ್ಥೆ ಮಾಡಿದನು ಮತ್ತು ಅಂತಹ ಅನೇಕ ಘಟನೆಗಳಿವೆ, ಇದು ಆಕಸ್ಮಿಕವಲ್ಲ. ಪ್ರಪಂಚದ ವಿವಿಧ ದೇಶಗಳಲ್ಲಿ ಇಂತಹ ಘಟನೆಗಳು ಇವೆ, ನಾನು ಮುಂಚೆಯೂ ಬಹಳಷ್ಟನ್ನು ಹೇಳಿದ್ದೇನೆ. ಇದು ಅಲ್ಲಾಹನ ಬೆಂಬಲದ ವಿಶೇಷ ಸಂಕೇತವಾಗಿದೆ.

ನಂತರ ಉಜ್ಬೇಕಿಸ್ತಾನದ ಇನ್ನೊಬ್ಬ ವ್ಯಕ್ತಿ ಅಜೀಮ್ ಔಫ್ ಸಾಹಿಬ್ ಇದ್ದಾರೆ. ಅವರು ಹೇಳುತ್ತಾರೆ ನನ್ನ ಜನನವು ಒಂದು ಮುಸ್ಲಿಂ ಕುಟುಂಬದಲ್ಲಿ ಆಗಿದೆ. ನಾಲ್ಕು ವರ್ಷಗಳ ಹಿಂದೆ ನಾನು ನಿಯಮಿತವಾಗಿ ನಮಾಝ್ ನಿರ್ವಹಿಸಲು ಪ್ರಾರಂಭಿಸಿದೆ. ನಂತರ ಅವರು ಪವಿತ್ರ ಖುರ್‌ಆನ್‌ನ ಅನುವಾದವನ್ನು ಓದಲು ಪ್ರಾರಂಭಿಸಿದರು. ಒಂದು ದಿನ ನನಗೆ ಸಂದೇಶವೊಂದು ತಲುಪಿತು, ಅದರಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ನನ್ನ ಉಮ್ಮತ್ತಿನಿಂದ ಅಂತಹ ಜನರು ಹುಟ್ಟುತ್ತಾರೆ, ಅಂದರೆ ಅವರು ಯಾವಾಗಲೂ ಸತ್ಯದ ಮೇಲಿರುತ್ತಾರೆ ಮತ್ತು ಯಾರೂ ಅವರಿಗೆ ಹಾನಿ ಮಾಡಲಾರರು ಎಂದು ಹೇಳಿದರು. ಈ ಪದಗಳು ನನ್ನ ಹೃದಯದಲ್ಲಿ ದೃಢವಾಗಿ ಪ್ರವೇಶಿಸಿವೆ. ನಾನು ನನ್ನ ಪ್ರಾರ್ಥನೆ ಮತ್ತು ನಮಾಝ್‌ಗಳಲ್ಲಿ ಈ ಜನರೊಂದಿಗೆ ಸೇರಲು ಸರ್ವಶಕ್ತನಾದ ಅಲ್ಲಾಹನನ್ನು ಪ್ರಾರ್ಥಿಸಲು ಪ್ರಾರಂಭಿಸಿದೆ ಎಂದು ಹೇಳುತ್ತಾರೆ. ತದನಂತರ ನಾನು ಅನೇಕ ಕಷ್ಟಗಳನ್ನು ಎದುರಿಸಿದೆ. ನನ್ನನ್ನು ಕೆಲಸದಿಂದ ತೆಗೆದುಹಾಕಲಾಯಿತು ಆದರೆ ನಾನು ಪ್ರಾರ್ಥಿಸುತ್ತಲೇ ಇದ್ದೆ. ಆಗ ನನಗೆ ಪವಿತ್ರ ಖುರ್‌ಆನ್ ಕಲಿಯುವ ಆಸೆಯಾಯಿತು. ಅಲ್ಲಾಹನು ಅದೇ ಉಸ್ತಾದ್ ಬಾಬರ್ ಸಾಹಿಬರನ್ನು ಮತ್ತೊಮ್ಮೆ ಭೇಟಿಯಾಗುವಂತೆ ಮಾಡಿದನು. ಶಿಕ್ಷಕರು ಅಹ್ಮದಿಯಾ ಜಮಾತ್‌ಗೆ ಸೇರಿದವರಾಗಿದ್ದರು. ಅದರ ಅರಿವು ನನಗಿರಲಿಲ್ಲ. ಮೊದಲು ನಾನು ಖುರ್‌ಆನ್ ಓದಲು ಕಲಿತೆ. ಒಂದು ದಿನ ನಾನು ನನ್ನ ಕನಸಿನಲ್ಲಿ ಕಅ್‌ಬಾವನ್ನು ನೋಡಿದೆ ಮತ್ತು ಅದರ ಹತ್ತಿರ ಬಂದು ನನ್ನ ಕೈಯಿಂದ ಅದನ್ನು ಮುಟ್ಟಿದೆ. ಆಗ ನನಗನ್ನಿಸಿದ್ದು ನಾನು ವಝು ಮಾಡಿಲ್ಲ ಎಂದು. ನಾನು ವಝೂ ಮಾಡಲು ಸ್ನಾನಗೃಹಕ್ಕೆ ಹೋದೆ ಅಷ್ಟರಲ್ಲಿ ನನ್ನ ಕಣ್ಣುಗಳು ತೆರೆದವು. ಆದಾಗ್ಯೂ ಅವರು ಹೇಳುತ್ತಾರೆ ಹೀಗೆ ಬೋಧನೆಯ ಸರಣಿಯು ಅಹ್ಮದಿ ಶಿಕ್ಷಕರೊಂದಿಗೆ ಮುಂದುವರೆಯಿತು. ಒಂದು ದಿನ ನಾನು ಅವರನ್ನು ಈಸ ಇಬ್ನ್ ಮರಿಯಮ್ ಸ್ವರ್ಗದಿಂದ ಇಳಿದ ಬಗ್ಗೆ ಪ್ರಶ್ನಿಸಿದೆ. ಈಸಾ ಇಬ್ನ್ ಮರ್ಯಮ್ ನಿಧನರಾಗಿದ್ದಾರೆ ಮತ್ತು ಈಸಾ ಇಬ್ನ್ ಮರ್ಯಮ್ ಆಗಿ ಕಾಣಿಸಿಕೊಳ್ಳಬೇಕಾದ ವ್ಯಕ್ತಿ ಇಮಾಮ್ ಮಹದಿ ಎಂದು ಹೇಳಿದರು. ತದನಂತರ ನಾನು ಸಂಶೋಧನೆ ಮಾಡಿ ಕಂಡುಕೊಂಡೆ ಮತ್ತು ಆ ವ್ಯಕ್ತಿ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಎಂದು ನನ್ನ ಶಿಕ್ಷಕರಿಗೆ ಹೇಳಿದೆ. ಶಿಕ್ಷಕರು ಅವರಿಗೆ ತಬ್ಲೀಗ್ ಮಾಡಲಿಲ್ಲ ಬದಲಿಗೆ ಅವರು ಹೇಳಿದರು ಅವರು ಆಗಮಿಸಿದ್ದಾರೆ ನೀವು ಸ್ವತಃ ಸಂಶೋಧಿಸಿ. ಅವರು ಇಮಾಮ್ ಮಹದಿಯಾಗಿದ್ದಾರೆ. ಸರಿ, ಅವರು ಇಂಟರ್‌ನೆಟ್ ಇತ್ಯಾದಿಗಳನ್ನು ಸಂಶೋಧಿಸಿ ಮಿರ್ಝಾ ಗುಲಾಮ್ ಅಹ್ಮದ್(ಅ) ಇಮಾಮ್ ಮಹದಿಯಾಗಿದ್ದಾರೆ ಎಂದು ಕಂಡುಕೊಂಎರು. ಇದನ್ನು ನನ್ನ ಶಿಕ್ಷಕರು ನನಗೆ ಹೇಳಿದಾಗ, ಅವರು ಮಿರ್ಜಾ ಗುಲಾಮ್ ಅಹ್ಮದ್ ಅವರು ನಾವು ಕಾಯುತ್ತಿರುವ ಅದೇ ಇಮಾಮ್ ಮಹದಿ ಎಂದು ಖಚಿತಪಡಿಸಿದರು. ಎಲ್ಲಾ ಚಿಹ್ನೆಗಳು ನೆರವೇರಿದ್ದರೂ ನಾನು ಇಮಾಮ್ ಮಹದಿ ಬಗ್ಗೆ ಅನುಮಾನ ವ್ಯಕ್ತಪಡಿಸಿದೆ. ಆಗ ನನ್ನ ಶಿಕ್ಷಕರು ನನಗೆ ಅಹ್ಮದೀಯ ಜಮಾಅತ್ ಬಗ್ಗೆ ಹೇಳಿದರು ಮತ್ತು ನಾನು ಕೂಡ ಅದೇ ಜಮಾಅತ್‌ನವನು ಎಂದು ಹೇಳಿದರು ಮತ್ತು ಅದು ಅಹ್ಮದಿಯಾ ಜಮಾಅತ್ ಸಂಖ್ಯೆಯಲ್ಲಿ ಇನ್ನೂ ಚಿಕ್ಕದಾಗಿದೆ ಮತ್ತು ನನಗೆ ನಿಮ್ಮಂತಹ ಇತರ ಶಿಷ್ಯರಿದ್ದಾರೆ ಮತ್ತು ಅವರು ನನ್ನನ್ನು ತಮ್ಮ ಶಿಷ್ಯರೊಂದಿಗೆ ಸೇರಿಸಿಕೊಂಡರು. ಆದಾಗ್ಯೂ, ಅವರು ಹೇಳುತ್ತಾರೆ: ನಾನು ಸಂಶೋಧಿಸಿದ್ದೇನೆ ಮತ್ತು ಪ್ರಾರ್ಥನೆ ಮತ್ತು ಸಂಶೋಧನೆಯ ನಂತರ ಸರ್ವಶಕ್ತನಾದ ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸಿದನೆಂದು ನಾನು ಅರಿತುಕೊಂಡೆ ಮತ್ತು ನಂತರ ನಾನು ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಿದೆ.

ಅಂತೆಯೇ, ಉಜ್ಬೇಕಿಸ್ತಾನ್‌ನ ಇನ್ನೊಬ್ಬ ವ್ಯಕ್ತಿ ಕೂಡ ಇದೇ ರೀತಿಯ ಘಟನೆಯನ್ನು ಹೊಂದಿದ್ದಾರೆ. ಅವರ ಸಮೂದಾಯಕ್ಕೂ ಬೈಅತ್ ಮಾಡಲು ಅವಕಾಶವನ್ನು ನೀಡಲಾಯಿತು ಮತ್ತು ನಂತರ ಅವರು ಕಳೆದ ವರ್ಷ ಬೈಅತ್ ಮಾಡಿದರು.

ನಂತರ ಆಫ್ರಿಕಾದ ದೇಶವೊಂದರಿಂದ ವರದಿಯಾಗಿದೆ. ಅಲ್ಲಿಯ ಮುಬಲ್ಲಿಗ್ ಸಿಲ್‌ಸಿಲಾ ಹೇಳುತ್ತಾರೆ: ಅವರು ಮತ್ತು ಅಲ್ಲಿನ ಸ್ಥಳೀಯ ಮುಅಲ್ಲಿಮ್‌ರ ಗುಂಪು ಜಮಾಅತ್‌ನ ಮೀಟಿಂಗ್‌ನಿಂದ ಹಿಂತಿರುಗುತ್ತಿದ್ದರು, ಅದು ಸಂಜೆಯ ಸಮಯವಾಗಿತ್ತು. ದೂರದ ಪ್ರಯಾಣವಿತ್ತು. ದಾರಿಯಲ್ಲಿ ನಾವು ಒಂದು ಹಳ್ಳಿಯನ್ನು ಹಾದುಹೋದೆವು, ಅಲ್ಲಿ ರಸ್ತೆ ಬದಿಯಲ್ಲಿ ಅನೇಕ ಜನರು ನಿಂತಿದ್ದರು, ಅವರು ನಮ್ಮನ್ನು ನಿಲ್ಲಿಸಿದರು ಮತ್ತು ಇಂದು ಬೆಳಿಗ್ಗೆ ನೀವು ಹಾದುಹೋಗುವುದನ್ನು ನಾವು ನೋಡಿದ್ದೇವೆ ಎಂದು ಹೇಳಿದರು. ನೀವು ಹಿಂತಿರುಗುತ್ತೀರಿ ಎಂದು ನಮಗೆ ಖಚಿತವಾಗಿತ್ತು. ನಾವು ನಿಮಗಾಗಿ ಬಹಳ ಸಮಯದಿಂದ ಕಾಯುತ್ತಿದ್ದೇವೆ. ನಾವು ನಿಮ್ಮನ್ನು ಒಂದು ಪ್ರಶ್ನೆ ಕೇಳಲು ಬಯಸುತ್ತೇವೆ ಏನು ನೀವು ನಮ್ಮ ಗ್ರಾಮದಿಂದ ಬೇಸರಗೊಂಡಿದ್ದೀರೋ? ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳಲ್ಲಿ ನಿಮ್ಮ ಸದಸ್ಯರಿದ್ದಾರೆ, ಜಮಾಅತ್ ಸ್ಥಾಪಿಸಲಾಗಿದೆ ಮತ್ತು ಮಸೀದಿಗಳಿವೆ ಆದರೆ ನೀವು ನಮ್ಮ ಹಳ್ಳಿಗೆ ಈ ಸಂದೇಶವನ್ನು ಏಕೆ ನೀಡುತ್ತಿಲ್ಲ. ಆಗ ಅವರು ಅದೇ ಸಮಯದಲ್ಲಿ ಅಲ್ಲಿಗೆ ಭೇಟಿ ನೀಡಿದರು. ಅಲ್ಲಾಹನ ಅನುಗ್ರಹದಿಂದ ಅಲ್ಲಿ ತಬ್ಲೀಗ್‌ನ ಕಾರ್ಯಕ್ರಮ ಜರುಗಿತು ಮತ್ತು ಸುಮಾರು ಜನರು ಅಲ್ಲಿ ಬೈಅತ್ ಮಾಎಇ ಜಮಾಅತ್‌ಗೆ ಸೇರ್ಪಡೆಯಾದರು. ಸರ್ವಶಕ್ತನಾದ ಅಲ್ಲಾಹನು ಸತ್ಯವನ್ನು ಹುಡುಕಲು ಜನರ ಹೃದಯದಲ್ಲಿ ಇರಿಸುತ್ತಿದ್ದಾನೆ.

ಮಧ್ಯ ಆಫ್ರಿಕಾದ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್ ಬರೆಯುತ್ತಾರೆ:

"ನಾಗಲಾ" ಗ್ರಾಮಕ್ಕೆ ಸೇರಿದ ಅಹ್ಮದಿ ಅಲ್ಲದ ಇಮಾಮ್ ನಮ್ಮ ಅಹ್ಮದಿ ಗ್ರಾಮಕ್ಕೆ ಉಪದೇಶಕ್ಕಾಗಿ ಬಂದರು. ಅವರು ಮಸೀದಿಯನ್ನು ನೋಡಿ ಅದನ್ನು ಯಾರು ನಿರ್ಮಿಸಿದರು? ಎಂದು ಕೇಳಿದರು ಅದಕ್ಕೆ ಇದನ್ನು ಅಹ್ಮದಿಯರು ತಯಾರಿಸಿದ್ದಾರೆ ಎಂದು ಉತ್ತರಿಸಲಾಯಿತು. ಅವರು ಹೇಳಿದರು, ಮಾಶಾಅಲ್ಲಾಹ್, ಇದು ಬಹಳ ಸುಂದರವಾದ ಮಸೀದಿಯಾಗಿದೆ. ಎರಡನೇ ದಿನ ಈ ಮೌಲ್ವಿ ಸಾಹೇಬರು ಸೆಂಟ್ರಲ್ ಮಿಷನ್ ಹೌಸ್ "ಬಾಂಗಿ"ಗೆ ಬಂದರು. ಮುಬಲ್ಲಿಗ್ ಸಾಹೇಬರಿಗೆ ಜಮಾಅತ್‌ನ ಬಗ್ಗೆ ಪ್ರಶ್ನೆಗಳನ್ನು ಕೇಳಲು ಮತ್ತು ಉತ್ತರಿಸಲು ಮುಂದುವರಿಸಿದರು. ಅಂತಿಮವಾಗಿ, ಅವರು ನಿಮ್ಮ ಜಮಾಅತ್ ಅನ್ನು ಹೇಗೆ ಪ್ರವೇಶಿಸುವುದು? ಎಂದು ಮುಬಲ್ಲಿಗ್ ಸಾಹೇಬರನ್ನು ಕೇಳಿದರು. ಅದಕ್ಕೆ ನಂಬಿಕೆಯು ಹೃದಯಕ್ಕೆ ಸಂಬಂಧಿಸಿದೆ ಎಂದು ಮುಬಲ್ಲಿಗ್ ಸಾಹೇಬರು ಹೇಳಿದರು. ಜಮಾಅತ್ತಿನ ನಂಬಿಕೆಗಳನ್ನು ನೀವು ಒಪ್ಪಿದರೆ, ನಿಮ್ಮ ಹೃದಯವು ಅಹ್ಮದಿಯ್ಯತ್ತನ್ನು ಒಪ್ಪಿಕೊಂಡಿದೆ ಎಂದರ್ಥ ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಹತ್ತು ಷರತ್ತುಗಳನ್ನು ಹೇಳಿದ ಬೈಅತ್ ಫಾರ್ಮ್ ನಮ್ಮಲ್ಲಿದೆ. ನೀವು ಅದನ್ನು ಓದಬೇಕು. ಅವರು ಬೈಅತ್ ಫಾರ್ಮನ್ನು ಓದಲು ಪ್ರಾರಂಭಿಸಿದಾಗ, ಅವರ ಕಣ್ಣುಗಳಿಂದ ನೀರು ಬೀಳುತ್ತಿತ್ತು. ನೀವು ಯಾಕೆ ಅಳುತ್ತೀರಿ ಎಂದು ನಾನು ಅವರನ್ನು ಕೇಳಿದಾಗ, ನಾನು ನನ್ನನ್ನು ಪಂಡಿತ ಎಂದು ಪರಿಗಣಿಸುತ್ತೇನೆ ಮತ್ತು ನಾನು ಇತರ ಧರ್ಮಗುರುಗಳಿಂದ ಜಮಾಅತ್ ಬಗ್ಗೆ ಸಾಕಷ್ಟು ಕೇಳಿದ್ದೇನೆ ಮತ್ತು ನಾನು ಬಹಳಷ್ಟು ತಪ್ಪಾಗಿ ಕೇಳಿದ್ದೇನೆ ಎಂದು ಉತ್ತರಿಸಿದರು. ಈ ಬೈಅತ್ ರೂಪದ ಹತ್ತು ನಿಬಂದನೆಗಳನ್ನು ಓದಿದ ನಂತರ, ನನ್ನ ಹಿಂದಿನ ಜೀವನದಿಂದ ನಾನು ಜಮಾಅತ್ ಬಗ್ಗೆ ಏನು ಯೋಚಿಸುತ್ತಿದ್ದೆ ಮತ್ತು ನಿಮ್ಮ ಬೋಧನೆಗಳು ಏನು ಎಂದು ನನಗೆ ಅಸಹ್ಯವಾಗುತ್ತಿದೆ. ಹಾಗಾಗಿ ನನ್ನ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಈ ಬೈಅತ್ ಫಾರ್ಮನ್ನು ಓದಿದ ನಂತರ, ಅಹ್ಮದಿಯಾ ಜಮಾಅತ್ ಸತ್ಯ ಮತ್ತು ನಿಜವಾದ ಜಮಾಅತ್ ಆಗಿದೆ ಮತ್ತು ಅವರ ಮಸೀದಿಗಳು ಸಹ ಕಿಬ್ಲಾದ ಕಡೆಯಾಗಿದೆ. ನಾವು ನಿರ್ವಹಿಸುವ ನಮಾಝೇ ಆಗಿದೆ ಮತ್ತು ನಾವು ಪಠಿಸುವ ಪವಿತ್ರ ಖುರ್‌ಆನ್ ಇದೇ ಖುರ್‌ಆನ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಇಂದು ಅಹ್ಮದೀಯ ಸಮುದಾಯವನ್ನು ಪೂರ್ಣ ಹೃದಯದಿಂದ ಸ್ವೀಕರಿಸುತ್ತೇನೆ. ಆದಾಗ್ಯೂ, ಅವರಿಗೆ ಹೆಚ್ಚಿನ ಪುಸ್ತಕಗಳನ್ನು ನೀಡಲಾಯಿತು ಮತ್ತು ಅವುಗಳನ್ನು ಓದಿದ ನಂತರ, ನಾನು ಈಗ ಇತರ ಧರ್ಮಗುರುಗಳನ್ನು ಮೌನಗೊಳಿಸುತ್ತೇನೆ ಎಂದು ಹೇಳಿದರು.

ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್ ಅನ್ನು ಹೇಗೆ ಹೆಚ್ಚಿಸುತ್ತಾನೆ, ಅವನು ವಿಶ್ವಾಸಿಗಳ ಸಂಖ್ಯೆಯನ್ನು ಹೇಗೆ ಹೆಚ್ಚಿಸುತ್ತಾನೆ.

ಗಯಾನಾದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ. ಲಿಂಡೆನ್ ಜಮಾಅತ್‌ನಲ್ಲಿ ಪುಸ್ತಕ ಮಳಿಗೆಗಳನ್ನು ಸ್ಥಾಪಿಸುವ ಮತ್ತು ಜನರಿಗೆ ಫ್ಲೈಯರ್‌ಗಳನ್ನು ವಿತರಿಸುವ ನಿಯಮಿತ ಕಾರ್ಯಕ್ರಮವನ್ನು ಹೊಂದಿದೆ. ಒಂದು ದಿನ ಯಾರೋ ನನಗೆ ಫೋನ್ ಮಾಡಿದರು, ನಾನು ನಿಮ್ಮ ಫ್ಲೈಯರ್ ಅನ್ನು ನೋಡಿದ್ದೇನೆ ಎಂದು ಹೇಳಿದರು, ನನ್ನ ಮನೆಯ ಹತ್ತಿರ ನಮಾಝ್ ಸೆಂಟರ್ ಇದೆ ಎಂದು ನನಗೆ ತಿಳಿದಿರಲಿಲ್ಲ. ಹೇಗಾದರೂ, ಶುಕ್ರವಾರ ಬಂದಿತು. ನಾನು ಎರಡು ವರ್ಷಗಳಿಂದ ಮುಸ್ಲಿಂ ಆಗಿದ್ದೇನೆ, ಆದರೆ ನನಗೆ ಪವಿತ್ರ ಖುರ್‌ಆನ್ ಓದುವುದು ಹೇಗೆ ಎಂದು ತಿಳಿದಿಲ್ಲ ಅಥವಾ ನಮಾಝನ್ನು ಕಲಿಯಲು ನನಗೆ ಅವಕಾಶ ಲಭಿಸಲಿಲ್ಲ, ದಯವಿಟ್ಟು ನನಗೆ ಪಾಠ ಕಲಿಸಿ ಎಂದು ಅವರು ಹೇಳಿದರು. ಅದಕ್ಕೆ ಅವರು ಹೇಲಿದರು ಬನ್ನಿ ಮತ್ತು ಬಹಳ ಜಾಗರೂಕರಿಂದಿರೀ, ಏಕೆಂದರೆ ಕೆಲವರು ಬೇಡಿಕೊಂಡು ಬರುವ ಬಹಳಷ್ಟು ತಪ್ಪು ಜನರಿದ್ದಾರೆ. ಹೇಗಾದರೂ ಅವರು ಹೇಳುತ್ತಾರೆ, ಒಂದುವೇಳೆ ಅವರು ನಿಜವಾಗಿಯೂ ಧರ್ಮವನ್ನು ಕಲಿಯಲು ಬಯಸಿದರೆ ನಮಗೆ ತಿಳಿದುಬರುತ್ತದೆ. ಎಂಉದ ಹೇಳಿದರು. ಅವರು ನಿಯಮಿತವಾಗಿ ಬಂದು ಪವಿತ್ರ ಖುರ್‌ಆನ್ ಕಲಿಯುತ್ತಿದ್ದರು ಮತ್ತು ಬಹಳ ಸಮಯ ಕಲಿತರೂ ಅವರು ಯಾವುದೇ ಬೇಡಿಕೆಗಳನ್ನು ನೀಡದಿದ್ದಾಗ ಅವರು ಧರ್ಮದ ಬಗ್ಗೆ ತುಂಬಾ ಗಂಭೀರವಾಗಿರುವುದು ನನಗೆ ತಿಳಿದಿತ್ತು ಎಂದು ಅವರು ಹೇಳುತ್ತಾರೆ. ನಂತರ ಅವರನ್ನು ಜಮಾಅತ್‌ನ ಬಗ್ಗೆ ಪರಿಚಯಿಸಿದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಚಿತ್ರವನ್ನು ತೋರಿಸಿದರು. ಅವರು ಬೈಅತ್ ಮಾಡಿದರು. ಅವರಿಗೆ ಇಸ್ಲಾಮಿನ ಹೆಸರನ್ನೂ ನೀಡಲಾಯಿತು. ನಂತರ ಸ್ವಲ್ಪ ಸಮಯದ ನಂತರ ಅವರು ಮುಅಲ್ಲಿಮ್ ಆಗಿ ನಾನು ಜಮಾತ್‌ನ ಮುಅಲ್ಲಿಮ್‌ನಾಗಲು ಬಯಸುತ್ತೇನೆ ಎಂದು ಹೇಳಿದರು. ಅಲ್ಲಿನ ಜಮಾಅತ್‌ನವರು ನನ್ನನ್ನು ಇದರ ಬಗ್ಗೆ ಕೇಳಿದರು. ಅದಕ್ಕೆ ನಾನು ಅವರಿಗೆ ಸರಿ ಎಂದು ಹೇಳಿದೆ. ನಿಜವಾಗಿಯೂ ಗಂಭೀರವಾಗಿದ್ದರೆ, ಅವರನ್ನು ಮುಅಲ್ಲಿಮ್‌ನನ್ನಾಗಿ ಮಾಡಿ. ತರಬೇತಿ ನೀಡಿ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ಈಗ ತರಬೇತಿ ಪಡೆದಿದ್ದಾರೆ. ಅವರು ಸಂಪೂರ್ಣವಾಗಿ ನಮಾಝ್ ನಿರ್ವಸುತ್ತಾರೆ ಮತ್ತು ಜುಮುಅ ಸಹ ನಿರ್ವಹಿಸುತ್ತಾರೆ. ಅವರು ಪವಿತ್ರ ಖುರ್‌ಆನ್‌ನ ಬೋಧನೆಗಳಿಂದ ತಫ್ಸಿರ್ ಅನ್ನು ಓದುವ ಮೂಲಕ ಕಲಿಸುತ್ತಾರೆ. ಉಪದೇಶವನ್ನೂ ಸಹ ನೀಡುತ್ತಾರೆ. ಅವರ ಬೈಅತ್‌ನ ನಂತರ, ನಮಾಝ್ ಕೇಂದ್ರದಲ್ಲಿ ಪ್ರದರ್ಶನವನ್ನು ನಡೆಸಲಾಯಿತು. ಅದರಲ್ಲಿ ಆ ವ್ಯಕ್ತಿಯ ಪೋಷಕರೂ ಸಹ ಬಂದಿದ್ದರು. ಅವರ ತಂದೆ ಇಸ್ಲಾಂ ಧರ್ಮದ ತೀವ್ರ ವಿರೋಧಿಯಾಗಿದ್ದರು, ಆದರೆ ಅವರ ತಾಯಿಯವರು ಇಸ್ಲಾಂನಲ್ಲಿ ಆಸಕ್ತಿ ಹೊಂದಿದ್ದರು ಮತ್ತು ನಿರ್ದಿಷ್ಟವಾಗಿ ಅವರು ಮಹಿಳೆಯರ ಹಿಜಾಬ್ ಅನ್ನು ಇಷ್ಟಪಡುತ್ತಿದ್ದರು ಎಂದು ವ್ಯಕ್ತಪಡಿಸಿದ್ದಾರೆ, ಇದು ಅವರ ತಾಯಿಯ ಆಸಕ್ತಿಯನ್ನು ಹುಟ್ಟುಹಾಕಿತು. ಹೇಗಾದರೂ, ಆ ಹುಡುಗನಿಗೆ ಮುಅಲ್ಲಿಮ್‌ಗೆ ನೀವು ನಿಮ್ಮ ತಂದೆತಾಯಿಗಳಿಗೆ ತಬ್ಲೀಗ್ ಮಾಡಿರಿ ಅದರಿಂದ ಅವರು ಅಹ್ಮದಿಯತ್ತಿಗೆ ಸೇರಿಸಬಹುದು ಮತ್ತು ಇಸ್ಲಾಂ ಧರ್ಮದ ಬೋಧನೆಗಳನ್ನು ಕಲಿಸಬಹುದು. ಆ ಜನರು ತಮ್ಮ ಧರ್ಮದ ಬಗ್ಗೆ ತುಂಬಾ ಕಟ್ಟುನಿಟ್ಟಾಗಿದ್ದಾರೆ ಮತ್ತು ನನ್ನ ತಾಯಿ ಚರ್ಚ್‌ಗೆ ಹೋಗುವ ಮಹಿಳೆ ಮತ್ತು ಅವಳು ಕೂಡ ಬ್ಯಾಪ್ಟಿಸ್ಮಾ ಸಹ ಆಗಿದ್ದಾಳೆ ಆದ್ದರಿಂದ ಹೇಗಾದರೂ ನಾವು ಪ್ರಾರ್ಥಿಸುತ್ತೇವೆ ಎಂದು ಅವರು ಹೇಳುತ್ತಾರೆ. ಹುಡುಗನಿಗೆ ತನ್ನ ತಾಯಿಗಾಗಿ ಪ್ರಾರ್ಥಿಸಲು ಹೇಳಲಾಯಿತು. ಅಲ್ಲಾಹನು ಅವರ ಹೃದಯವನ್ನು ಇಸ್ಲಾಮಿನ ಕಡೆಗೆ ತಿರುಗಿಸಲಿ. ಒಂದು ದಿನ ಅವನ ತಾಯಿ ತನ್ನ ಮಗನಿಗೆ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದಳು ಮತ್ತು ಶುಕ್ರವಾರದ ಪ್ರಾರ್ಥನೆಗೆ ಬರಲು ಪ್ರಾರಂಭಿಸಿದಳು ಎಂದು ಹೇಳಲಾಗುತ್ತದೆ. ನಂತರ ಒಂದು ದಿನ ಇದ್ದಕ್ಕಿದ್ದಂತೆ ಅವಳು ನಾನು ಬೈಅತ್ ಮಾಡಲು ಬಯಸುತ್ತೇನೆ ಎಂದು ಸ್ವತಃ ಹೇಳಿದಳು. ನಂತರ ಅವಳು ಜಮಾಅತ್‌ಗೆ ಸೇರಿದಳು ಮತ್ತು ಅಲ್ಲಾಹನ ಅನುಗ್ರಹದಿಂದ ನಿಯಮಿತವಾಗಿ ಜನರು ಜಮಾಅತ್‌ಗೆ ಸೇರುತ್ತಿದ್ದಾರೆ. ಅವರು ಪ್ರತಿ ಶುಕ್ರವಾರ ಬರುತ್ತಾರೆ. ಅವರು ನಮಾಝ್ ನಿರ್ವಹಿಸುತ್ತಾರೆ ಮತ್ತು ಅವರು ಜಮಾಅತ್‌ಗೆ ಸೇರಿದ ನಂತರ ಅಲ್ಲಾಹನ ಅನುಗ್ರಹದಿಂದ ತನಗೆ ಕ್ರಿಶ್ಚಿಯನ್ ಧರ್ಮದಲ್ಲಿ ಇಲ್ಲದ ಆರೋಗ್ಯ ಮತ್ತು ಸಂಪತ್ತಿನಲ್ಲಿ ಹೆಚ್ಚು ಅನುಗ್ರಹಿಸಲಾಗಿದೆ ಎಂದು ಒಪ್ಪಿಕೊಂಡರು ಮತ್ತು ಈಗ ಅವರ ತಾಯಿ ಎಂ.ಟಿ.ಎ. ನಿಯಮಿತವಾಗಿ ನೋಡುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅಲ್ಲಾಹನು ಮಾಡಿದ ವಾಗ್ದಾನಗಳು ಈಡೇರಿದಕ್ಕೆ ಸಂಬಂಧಿಸಿ ಕೆಲವು ಘಟನೆಗಳನ್ನು ನಾನು ಹೇಳಿರುವನು. ಇಂತಹ ಅನೇಕ ಘಟನೆಗಳಿವೆ. ವಿರೋಧಿಗಳು ತಮ್ಮ ಅತಿಯಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ಮತ್ತೊಂದೆಡೆ ಅಲ್ಲಾಹನು ಲೋಕದ ಪ್ರತಿಯೊಂದು ದೇಶದಲ್ಲಿ ಜಮಾಅತಿನ ಪ್ರಗತಿಯ ಹೊಸ ಮಾರ್ಗಗಳನ್ನು ತೆರೆಯುತ್ತಿದ್ದಾನೆ. ಒಟ್ಟಿನಲ್ಲಿ, ಇದಕ್ಕಾಗಿ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರ ಜೊತೆಗೆ ನಮ್ಮ ಸ್ಥಿತಿಗಳ ಬಗ್ಗೆ ಸಹ ಪರಿಶೋಧಿಸುತ್ತಾ ಇರಬೇಕು. ನಮ್ಮ ವಿಶ್ವಾಸಗಳನ್ನು ದೃಢಪಡಿಸಲು ಸಹ ಪ್ರಯತ್ನಗಳನ್ನು ಮಾಡಬೇಕು.

ಆಪತ್ತುಗಳು ಬರುತ್ತವೆ, ಆದರೆ ಅಂತಿಮ ವಿಜಯ ಅಲ್ಲಾಹನು ಸ್ಥಾಪಿಸಿದ ಜಮಾಅತಿನದ್ದೇ ಆಗಿರುತ್ತದೆ, ಆದ್ದರಿಂದ ಎಂದಿಗೂ ನಿಮ್ಮ ವಿಶ್ವಾಸಗಳು ಅಲುಗಾಡದಂತೆ ನೋಡಿರಿ ಎಂಬ ಸಂಗತಿಯನ್ನು ನಮ್ಮ ಮಕ್ಕಳ ಹೃದಯಗಳಲ್ಲಿ ನಾವು ಹಾಕಿಸಬೇಕು. ಹೊಸಬರಿಗೂ ಮತ್ತು ಎಲ್ಲ ಹಳೆಯ ಅಹ್ಮದಿಯರಿಗೂ ಅಲ್ಲಾಹನು ಸ್ಥೈರ್ಯವನ್ನು ನೀಡಲಿ. ನಂಬಿಕೆ ಮತ್ತು ದೃಢವಿಶ್ವಾಸದಲ್ಲಿ ವರ್ಧನೆ ಉಂಟುಮಾಡುತ್ತಾ ಹೋಗಲಿ – ಆಮೀನ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಉಲ್ಲೇಖಿಸುತ್ತೇನೆ, ಅವರ ನಮಾಝೆ ಜನಾಝ ಗಾಯಿಬ್ ನಂತರ ನಿರ್ವಹಿಸಲಾಗುವುದು. ಮೊದಲ ಪ್ರಸ್ತಾವನೆ ಗುಲಾಮ್ ಖಾದಿರ್ ಸಿಯಾಲ್ಕೋಟ್ ಅವರ ಪತ್ನಿ ಪರ್ವೀನ್ ಅಖ್ತರ್ ಸಾಹಿಬ ಅವರದ್ದಾಗಿದೆ. ಅವರು 90ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರಿಗೆ ಮೂವರು ಪುತ್ರರು ಮತ್ತು ನಾಲ್ವರು ಪುತ್ರಿಯರಿದ್ದಾರೆ. ಒಬ್ಬ ಪುತ್ರ ಆರಿಫ್ ಮಹ್ಮೂದ್, ಬೆನಿನ್‌ನ ಮುಬಲ್ಲಿಗ್ ಆಗಿದ್ದಾರೆ, ಕ್ರಿಯಾ ಕ್ಷೇತ್ರದಲ್ಲಿದ್ದ ಕಾರಣ ತನ್ನ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಆರಿಫ್ ಮಹ್ಮೂದ್, ಮುಬಲ್ಲಿಗ್ ಸಿಲ್‌ಸಿಲಾ ಹೇಳುತ್ತಾರೆ: ಅವರ ತಾಯಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಹಝ್ರತ್ ಚೌಧರಿ ಇಮಾಮ್ ದಿನ್ ಸಾಹಿಬ್ ಚೌಹಾನ್ ಅವರ ಮೊಮ್ಮಗಳು ಆಗಿದ್ದರು. ಮತ್ತು ಮುಅಲ್ಲಿಮ್ ಸಾಹಿಬ್‌ರಾದ ಗುಲಾಮ್ ಅಹ್ಮದ್ ಸಾಹಿಬ್ ಅವರ ಮಗಳಾಗಿದ್ದರು. ಖಾದಿಯಾನ್‌ನಲ್ಲಿ

ಜನಿಸಿದರು. ಖಾದಿಯಾನ್ ನಿಂದ ಪ್ರಾಥಮಿಕ ಶಿಕ್ಷಣ ಪಡೆದರು. ಅವರು ಹೇಳುತ್ತಾರೆ ನಮ್ಮ ತಾಯಿ ಹೇಳುತ್ತಿದ್ದರು ಅವರು ಹಝ್ರತ್ ಅಮ್ಮಾ ಜಾನ್(ರ) ಸಾಹಿಬ ಅವರ ಸೇವೆಯಲ್ಲಿ ತಮ್ಮ ಬಾಲ್ಯದ ಬಹುಪಾಲು ಸಮಯ ಕಳೆದ ಕಾರಣ ಅವರಿಂದ ತರಬೇತಿ ಪಡೆದರು. ಅವರು ಅವರಿಂದ ಧಾರ್ಮಿಕ ಶಿಕ್ಷಣ ಮತ್ತು ಖುರ್‌ಆನ್‌ನ ಪಠಣವನ್ನು ಕಲಿತರು ಮತ್ತು ಹಝ್ರತ್ ಅಮ್ಮಾ ಜಾನ್(ರ) ಅವರ ಹೆಚ್ಚಿನ ಸಮಯವನ್ನು ಅವರ ಸೇವೆಯಲ್ಲಿಯೇ ಕಳೆಯುತ್ತಿದ್ದರು. ಅವರು ಮಲಗುವ ಮೊದಲು ತಮ್ಮ ಹಲವಾರು ಘಟನೆಗಳನ್ನು ಹೇಳುತ್ತಿದ್ದರು. ಕೆಲವೊಮ್ಮೆ ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ರಾತ್ರಿ ಮನೆಗೆ ಬಂದು ಹಝ್ರತ್ ಅಮ್ಮಾ ಜಾನ್ ಸಾಹಿಬ ರವರನ್ನು ಭೇಟಿಯಾಗುತ್ತಿದ್ದರು ಆಗ ನಾನು ಸೇವೆ ಮಾಡುವುದನ್ನು ನೋಡಿ, ನಿಮ್ಮ ಒಳ್ಳೆಯ ಸಂಗಾತಿಗಾಗಿಯೂ ಪ್ರಾರ್ಥಿಸಬೇಕು ಎಂದು ಅವರು ಹೇಳುತ್ತಿದ್ದರು. ಅವರು ಹೇಳುತ್ತಾರೆ ನನ್ನ ತಾಯಿ ಮದುವೆಯಾದಾಗ, ಸ್ವಲ್ಪ ಸಮಯದ ನಂತರ 1953 ರಲ್ಲಿ ಪರಿಸ್ಥಿತಿ ಹದಗೆಟ್ಟಿತು. ಗ್ರಾಮದ ಕೆಲವು ಜನರು ದೌರ್ಬಲ್ಯ ತೋರಿದರೂ ಅಲ್ಲಾಹನ ಅನುಗ್ರಹದಿಂದ ತಮ್ಮ ಧರ್ಮದಲ್ಲಿ ದೃಢವಾಗಿ ನಡೆದುಕೊಂಡು ಪತಿಯನ್ನು ದೃಢವಾಗಿ ಉಳಿಸಿಕೊಂಡರು. ತದನಂತರ ಅವರು ಮೌಲ್ವಿ ಸಾಹಿಬ್‌ನಿಂದ ಪವಿತ್ರ ಖುರ್‌ಆನ್ ಅನ್ನು ಪಠಿಸಲು ಪ್ರಾರಂಭಿಸಿದರು ಮತ್ತು ನಮಾಝ್ ಹಾಗೂ ಸೂರಾಗಳನ್ನು ಕಂಠಪಾಠ ಮಾಡಲು ಪ್ರಾರಂಭಿಸಿದರು. ಅದೇ ರೀತಿ ತಮ್ಮ ಕ್ಯಾಂಪಿನಲ್ಲೇ ಪುಟ್ಟ ಮಸೀದಿ ಕಟ್ಟುವ ಮೂಲಕ ಅಲ್ಲಿಯೂ ತಮ್ಮ ಜಮಾಅತ್‌ನ ಕೇಂದ್ರವನ್ನಾಗಿಸಿಕೊಂಡರು.

ಸೇನೆಯಲ್ಲಿದ್ದ ಅವರ ಹಿರಿಯ ಮಗ ಖಾಲಿದ್ ಮಹ್ಮೂದ್ ಹೇಳುತ್ತಾರೆ. ಧರ್ಮವನ್ನು ಲೋಕದ ಮೇಲೆ ಆದ್ಯತೆ ನೀಡಿದರು. ನಾವು ಧರ್ಮದ ಮೇಲೆ ದೃಢವಾಗಿ ನೆಲೆಗೊಂಡರೆ, ಪ್ರಪಂಚದ ವ್ಯವಹಾರಗಳು ತಾವಾಗಿಯೇ ಸರಿಪಡಿಸಲ್ಪಡುತ್ತವೆ ಎಂದು ಅವರು ನಮಗೆ ಹೇಳುತ್ತಿದ್ದರು. ಬಾಲ್ಯದಿಂದಲೂ ನಮಗೆ ಪ್ರಾರ್ಥನೆಯ ಅಭ್ಯಾಸವನ್ನು ಕಲಿಸಲಾಗಿದೆ ಎಂದು ಹೇಳಲಾಗುತ್ತದೆ ಮತ್ತು ಫಜ್ರ್ ನಮಾಝ್‌ನ ಸಮಯದಲ್ಲಿ ಮಸೀದಿ ಸ್ವಲ್ಪ ದೂರದಲ್ಲಿದೆ, ಆದ್ದರಿಂದ ಅವರು ತಾನೇ ಮಸೀದಿಯಿಂದ ಹೊರಡುತ್ತಿದ್ದರು. ಅವರು ಅಹ್ಮದೀಯರಲ್ಲದ ನೆರೆಹೊರೆಯ ಅನೇಕ ಮಹಿಳೆಯರಿಗೆ ಪವಿತ್ರ ಖುರ್‌ಆನ್ ಕಲಿಸಿದರು. ಈಗ ಅವರು ಅಲ್ಲಿ ಪವಿತ್ರ ಖುರ್‌ಆನ್ ಅನ್ನು ಕಲಿಸಲು ಸಾಧ್ಯವಿಲ್ಲ, ಆದರೆ ಹಿಂದೆ ತುಂಬಾ ಉದಾತ್ತತೆ ಇತ್ತು, ಅಹ್ಮದೀಯರಿಂದ ಪವಿತ್ರ ಖುರ್‌ಆನ್ ಅನ್ನು ಓದುತ್ತಿದ್ದ ಅನೇಕ ಅಹ್ಮದೀಯೇತರ ಜನರಿದ್ದಾರೆ.

ನಂತರ ಅವರ ಪುತ್ರ ಬರೆಯುತ್ತಾರೆ ಅಥವಾ ಮಗಳು ಬರೆದಿರಬಹುದು, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ರೂಢಿಯಲ್ಲಿ ಇಲ್ಲ. ಅವರ ಮಗಳು ದೊಡ್ಡವಳಾದಾಗ ಅವರ ತಾಯಿ ಶಾಲೆಗೆ ಸೇರಿಸಲು ಪ್ರಾರಂಭಿಸಿದರು, ಆದರೆ ಅಜ್ಜ ವಿರೋಧಿಸಿದರು. ಶಿಕ್ಷಣವನ್ನು ನೀಡಬೇಕೆಂದು ಅವರು ನಿರಂತರವಾಗಿ ಮನವೊಲಿಸಲು ಪ್ರಯತ್ನಿಸಿದರು ಮತ್ತು ಹುಡುಗಿಯರಿಗೆ ಕನಿಷ್ಠ ತರಗತಿ ಸಾಹಿತ್ಯವನ್ನು ಓದಲು ಮತ್ತು ಅವರ ಮಕ್ಕಳಿಗೆ ತರಬೇತಿ ನೀಡಲು ಸಾಕಷ್ಟು ಶಿಕ್ಷಣವನ್ನು ನೀಡಬೇಕು ಎಂದು ಅವರು ಯಾವಾಗಲೂ ಹೇಳುತ್ತಿದ್ದರು.

ರಶೀದ್ ಅಹ್ಮದ್ ಸಾಹಿಬ್ ಮಾಂಗನ ನಂಬರ್ ದಾರ್ ಆಗಿದ್ದಾರೆ, ಅವರು ಹೇಳುತ್ತಾರೆ ನಮ್ಮ ಕ್ಯಾಂಪ್ ಅವರ ಕ್ಯಾಂಪ್ ಬಳಿ ಇತ್ತು. ಅವರನ್ನು ನೋಡಿ ನಾವೂ ಅಹ್ಮದೀಯರಾದೆವು, ಆದರೆ ನಮಾಝಿನತ್ತ ಒಲವು ಇರಲಿಲ್ಲ. ಅವರು ಕ್ಯಾಂಪ್‌ಗೆ ಬಂದಾಗ, ನಮ್ಮೆಲ್ಲರಿಗೂ ನಮಾಝ್ ನಿರ್ವಹಿಸಲು ಸಲಹೆ ನೀಡುತ್ತಿದ್ದರು. ಮಸೀದಿ ದೂರದಲ್ಲಿದೆ ಎಂದು ನಾವು ನೆಪಹೂಡಿದಾಗ ಅವರು ಮೌನವಾಗಿರುತ್ತಿದ್ದರು. ಮತ್ತೆ ಅವರು ಹೇಳುತ್ತಾರೆ ನೀವು ಹೊಲದ ಮಣ್ಣನ್ನು ತಲೆಯ ಮೇಲೆ ಹೊತ್ತುಕೊಂಡು ಕ್ಯಾಂಪ್‌ಗೆ ತರುವುದನ್ನು ನಾವು ನೋಡಿದ್ದೇವೆ. ಈ ಮಣ್ಣನ್ನು ತರುವ ಪ್ರಕ್ರಿಯೆಯು ಸುಮಾರು ಒಂದು ವಾರದವರೆಗೆ ನಡೆಯಿತು, ನಂತರ ಈ ಮಣ್ಣಿನಿಂದ ಅವರು ಕ್ಯಾಂಪ್‌ನ ಪಶ್ಚಿಮ ಭಾಗದಲ್ಲಿ ಗೋಡೆಯನ್ನು ನಿರ್ಮಿಸಿದರು ಮತ್ತು ಎರಡು ಮೊಳಕ್ಕೆ ಸಮಾನವಾದ ನಾಲ್ಕು ಮೊಳದ ಗೋಡೆಯನ್ನು ನಿರ್ಮಿಸಿದರು. ನಂತರ ಆ ಸ್ಥಳವನ್ನು ಸುತ್ತಿ ಸ್ವಚ್ಛ ಮಾಡಿದರು. ಆಗ ಅವರು ಮನೆಯಿಂದ ಚಾಗಿಲು ತಂದು ಅಲ್ಲಿ ಇರಿಸಿದರು ಮತ್ತು ನಂತರ ಆ ಜನರಿಗೆ ಹೇಳಿದರು, ನಿಮಗೆ ಮಸೀದಿ ಇಲ್ಲ ಎಂದು ಹೇಳುತ್ತಿದ್ದಿರಿ, ಅದಕ್ಕೆ ನೀವು ದೂರ ಸರಿಯುತ್ತಿದ್ದೀರಿ ಆದ್ದರಿಂದ ಈಗ ನಾನು ಇಲ್ಲಿ ನನ್ನ ಡೇರೆಯಲ್ಲಿ ಮಸೀದಿಯನ್ನು ನಿರ್ಮಿಸಿದ್ದೇನೆ. ಇಲ್ಲಿಗೆ ಬಂದು ಬಾಜಮಾಅತ್ ನಮಾಝನ್ನು ನಿರ್ವಹಿಸಿರಿ. ಈಗ ಪ್ರಾರ್ಥನೆಯಲ್ಲಿ ಸೋಮಾರಿಯಾಗಬೇಡಿ. ಅವರು ಹೇಳುತ್ತಾರೆ ಹೀಗೆ ಅವರು ನಮ್ಮನ್ನು ಪ್ರಾರ್ಥನಾಶೀಲರನ್ನಾಗಿಸಿದ್ದು ಸತ್ಯ. ಇದಾಗಿಗೆ ಹಿರಿಯರ ಉನ್ನತ ಉದಾಹರಣೆಗಳು, ನೀವು ಮನವರಿಕೆ ಮಾಡಬೇಕಾದರೆ ನೆಪ ಮಡಿದರೆ ನಂತರ ಕಾರ್ಯನಿರ್ವಹಿಸಿ ಸ್ವತಃ ಎಂತಹ ಉದಾಹರಣೆಯನ್ನು ತೋರಿಸಿದರು ಅದರೆ ಅದರಿಂದ ಅನ್ಯರು ನಿಸ್ಸಹಾಯಕರಾದರು.

ನಂತರ ಅವರ ಪುತ್ರಿ ತಾಳ್ಮೆ ಮತ್ತು ತೃಪ್ತಿಯ ವ್ಯಕ್ತಿತ್ವ ಎಂದು ಬರೆಯುತ್ತಾರೆ. ಹಝ್ರತ್ ಅಮ್ಮಾ ಜಾನ್(ರ) ಅವರ ಈ ಸಲಹೆಯನ್ನು ನೀವು ತೆಗೆದುಕೊಳ್ಳಬೇಕು ಎಂದು ಅವರು ನಮಗೆ ಉಪದೇಶಿಸುತ್ತಿದ್ದರು, ಅಂದರೆ ಎಂದಿಗೂ ತಾಳ್ಮೆ ಕಳೆದುಕೊಳ್ಳಬೇಡಿ ಮತ್ತು ನಿಮ್ಮ ಅತ್ತೆ ಮನೆಯಲ್ಲಿ ಏನು ಸಿಕ್ಕರೂ ಅದರಲ್ಲಿ ತೃಪ್ತರಾಗಿರಿ ಮತ್ತು ದೇವರ ಚಿತ್ತದಲ್ಲಿ ಯಾವಾಗಲೂ ತೃಪ್ತರಾಗಿರಿ. ಮತ್ತು ನಿಯಮಿತವಾಗಿ ನಮಾಝ್‌ಗಳನ್ನು ನಿರ್ವಹಿಸಿ ಮತ್ತು ನಿಮ್ಮ ಮಕ್ಕಳನ್ನೂ ಅದಕ್ಕೆ ಬಾಧ್ಯರನ್ನಾಗಿ ಮಾಡಿ. ಅಲ್ಲಾಹನು ಅದರೊಂದಿಗೆ ಜೀವನಾಂಶವನ್ನು ಅನುಗ್ರಹಿಸುತ್ತಾನೆ ಎಂದು ಅವರು ಹೇಳುತ್ತಿದ್ದರು.

ಅವರ ಮುರಬ್ಬಿಯಾಗಿರುವ ಪುತ್ರ, ಅವರು ಹೇಳುತ್ತಾರೆ ಅವರು ಜಾಮಿಯಾದಲ್ಲಿ ಪ್ರವೇಶಿಸಿದಾಗ ಅವರು ಹೀಗೆ ಹೇಳುತ್ತಿದ್ದರು: ಮಗನೇ! ನೀವು ಅಧ್ಯಯನದಲ್ಲಿ ಉನ್ನತ ಸ್ಥಾನವನ್ನು ಪಡೆಯದಿದ್ದರೂ, ಯಾವುದೇ ತೊಂದರೆಯಿಲ್ಲ, ಆದರೆ ಯಾವಾಗಲೂ ಖಲೀಫ ಎ ವಖ್ತ್ (ಸಮಯದ ಇಮಾಮ್ಗೆ) ವಿಧೇಯರಾಗಿ ಉನ್ನತ ಸ್ಥಾನದಲ್ಲಿ ಉಳಿಯಲು ಪ್ರಯತ್ನಿಸಿ. ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ. ಶ್ರೇಯಾಂಕಗಳನ್ನು ಹೆಚ್ಚಿಸಿ ಮತ್ತು ಅವರ ಮಕ್ಕಳಿಗಾಗಿ ಅವರ ಪ್ರಾರ್ಥನೆಗಳನ್ನು ಪೂರೈಸುವಂತಾಗಲಿ.

ಎರಡನೇ ಜನಾಝ ಮುಮ್ತಾಜ್ ವಸೀಮ್ ಸಾಹಿಬಾ, ಅವರು ಚೌಧರಿ ವಸೀಮ್ ಅಹ್ಮದ್ ನಾಸಿರ್ ಸಾಹಿಬ್ ದಿವಂಗತ ಘಟ್ಯಾಲಿಯಾನ್ ಅವರ ಪತ್ನಿಯಾಗಿದ್ದರು. ಕಳೆದ ಕೆಲ ದಿನಗಳ ಹಿಂದೆ ಅವರೂ ನಿಧನ ಹೊಂದಿದ್ದಾರೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪುತ್ರರೂ ಸಹ ಪ್ರಸ್ತುತ ಕಾಲದಲ್ಲಿ ಜಾಂಬಿಯಾದಲ್ಲಿ ಮುಬಲ್ಲಿಗ್ ಆಗಿದ್ದಾರೆ. ದಿವಂಗತರು ಹಝ್ರತ್ ಮಿಯಾನ್ ಚಿರಾಗ್ ದಿನ್ ಸಾಹಿಬ್ ರೀಸ್ ಲಾಹೋರ್ ಅವರ ಕುಟುಂಬಕ್ಕೆ ಸೇರಿದವರು. ದಿವಂಗತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಸಿದ್ಧ ಸಹಾಬಿ ಹಝ್ರತ್ ಮಿಯಾಂ ಅಬ್ದುರ್ ರಶೀದ್ ಸಾಹಿಬ್(ರ) ಅವರ ಮೊಮ್ಮಗಳು (ತಾಯಿ ಕಡೆಯಿಂದ) ಮತ್ತು ಮರ್‌ಹಮೆ ಈಸ ಎಂಬ ಸುಪ್ರಸಿದ್ಧರಾದ ಹಝ್ರತ್ ಹಕೀಮ್ ಮುಹಮ್ಮದ್ ಹುಸೈನ್ ಸಾಹಿಬ್(ರ) ಅವರ ಮೊಮ್ಮಗಳಾಗಿದ್ದರು. ದಿವಂಗತರು ತುಂಬಾ ಹರ್ಷಚಿತ್ತದಿಂದ, ಸೌಮ್ಯವಾಗಿ, ಕರುಣಾಮಯಿ, ಪ್ರೀತಿ ಮತ್ತು ಸಹಾನುಭೂತಿಯ ವ್ಯಕ್ತಿಯಾಗಿದ್ದರು. ಎಲ್ಲರೂ ನಿಮ್ಮ ಗುಣಗಳನ್ನು ಗುರುತಿಸಿದ್ದಾರೆ. ಅವರು ಖಿಲಾಫತ್ ಮತ್ತು ನಿಝಾಮೆ ಜಮಾಅತ್ ಅನ್ನು ತುಂಬಾ ಗೌರವಿಸುತ್ತಿದ್ದರು. ಅವರು ಯಾವಾಗಲೂ ದುಆಗಾಗಿ ನನಗೆ ಪತ್ರಗಳನ್ನು ಬರೆಯುತ್ತಿದ್ದರು ಮತ್ತು ಇತರರಿಗೂ ಪತ್ರಗಳನ್ನು ಬರೆಯಲು ಸಲಹೆ ನೀಡುತ್ತಿದ್ದರು. ನಿಯಮಿತವಾಗಿ ನಮಾಝನ್ನು ನಿರ್ವಹಿಸುವುದು ಮತ್ತು ಪವಿತ್ರ ಖುರ್‌ಆನ್ ಅನ್ನು ಪಠಿಸುವುದು. ನಿಮ್ಮ ಜೀವನದ ಕೊನೆಯವರೆಗೂ ಚಂದ ಪಾವತಿಸುವುದನ್ನು ಮುಂದುವರಿಸಿದರು. ಅಲ್ಲಾಹನ ಅನುಗ್ರಹದಿಂದ ಬಿ.ಎ. ಪದವಿದಾರೆಯಾಗಿದ್ದರು. ಅವರು ಹೇಳುತ್ತಾರೆ ನಮ್ಮ ತಂದೆ ಕೆಲಸದಿಂದ ನಿವೃತ್ತರಾದ ನಂತರ ಕರಾಚಿಯಿಂದ ಹಳ್ಳಿಗೆ ಸ್ಥಳಾಂತರಗೊಂಡಾಗ ಅವರು ಹುಡುಗ ಹುಡುಗಿಯರಿಗೆ ಖೈದಾ ಮತ್ತು ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು ಮತ್ತು ಲೌಕಿಕ ಶಿಕ್ಷಣವನ್ನು ಸಹ ಮುಂದುವರೆಸಿದರು. ಅವರು ಬಹಳ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು, ಆದರೆ ಅವರು ತನ್ನ ಅನಾರೋಗ್ಯವನ್ನು ಬಹಳ ತಾಳ್ಮೆಯಿಂದ ಸಹಿಸಿಕೊಂಡರು. ಯಾರಿಗೂ ಅವರು ದೂರಲಿಲ್ಲ. ಮುರಬ್ಬಿ ಸಾಹಿಬ್ ಅವರು ಬರೆಯುತ್ತಾರೆ: ಹಿರಿಯರಾಗಿದ್ದರೂ ಯಾವುದೇ ತಪ್ಪಾಗಿದ್ದರೆ, ಅವರು ಯಾವಾಗಲೂ ಕ್ಷಮೆಯಾಚಿಸುತ್ತಿದ್ದರು. ಅವರ ಇಬ್ಬರು ಪುತ್ರರು ವಕ್ಫ್ ಆಗಿದ್ದಾರೆ ಮತ್ತು ಅವರು ಬಹಳ ಸಂತೋಷದಿಂದ ಮಕ್ಕಳನ್ನು ಅರ್ಪಿಸಿದರು ಮತ್ತು ಮಕ್ಕಳು ವಕ್ಫ್ ಆಗಿದ್ದಾರೆ ಎಂದು ತುಂಬಾ ಸಂತೋಷಪಟ್ಟರು. ಅವರ ತಂದೆಗೆ ಎರಡು ಮದುವೆಯಾಗಿತ್ತು. ಮೊದಲ ತಾಯಿಯ ಮರಣದ ನಂತರ, ನಮ್ಮ ಈ ಸಹೋದರರು ತಮ್ಮ ಸ್ವಂತ ಮಕ್ಕಳಂತೆ ಬೆಳೆದರು ಮತ್ತು ಅವರ ತಾಯಿಯನ್ನು ಎಂದಿಗೂ ಕಳೆದುಕೊಳ್ಳಲಿಲ್ಲ ಎಂದು ಹೇಳಲಾಗುತ್ತದೆ. ಇವರು ಜಾಂಬಿಯಾಗೆ ಹೋದಾಗ, ಅವರು ಬಹಳ ಪ್ರಾರ್ಥನೆಯೊಂದಿಗೆ ಕಳುಹಿಸಿಕೊಟ್ಟರು ಮತ್ತು ಅವರು ಹೇಳುತ್ತಾರೆ ನಾನು ಸ್ವಲ್ಪ ಸಮಯದ ಮುಂಚೆ ನಾನು ಅವರನ್ನು ನೋಡಲು ಹೋಗಿದ್ದೆ ಮತ್ತು ಹಿಂದಿರುಗುವಾಗ ಅವರು ಸರ್ವಶಕ್ತನಾದ ಅಲ್ಲಾಹನು ನಿಮ್ಮ ರಕ್ಷಕ ಎಂದು ಹೇಳಿದರು. ಈಗ ಮತ್ತೆ ಭೇಟಿಯಾಗದಿರಬಹುದು. ಅವರು ಐವರು ಪುತ್ರರು ಹಾಗೂ ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಎರಡು ಅಲ್ಲಾಹನ ಅನುಗ್ರಹದಿಂದ

ವಕಿಫೆ ಝಿಂದಗೀಯಾಗಿದ್ದಾರೆ. ನಸೀರ್ ನಾಸಿರ್ ಸಾಹಿಬ್ ಮುಅಲ್ಲಿಮ್ ವಕ್ಫ್ ಜದೀದ್ ಆಗಿದ್ದಾರೆ. ಇನ್ನೋರ್ವರು ಜಾಂಬಿಯಾದಲ್ಲಿದ್ದಾರೆ ಮತ್ತು ವಿದೇಶದಲ್ಲಿರುವುದರಿಂದ, ಕ್ಷೇತ್ರದಲ್ಲಿರುವುದರಿಂದ ಇವರು ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ.

ಮೂರನೆಯ ಉಲ್ಲೇಖ ಬ್ರಿಗೇಡಿಯರ್ ಮನವ್ವರ್ ಅಹ್ಮದ್ ರಾಣಾ ಸಾಹಿಬ್ ಅವರದ್ದಾಗಿದೆ. ಅವರು ಈ ಜಮಾಅತ್ ರಾವಲ್ಪಿಂಡಿ ಜಿಲ್ಲೆಯ ಜನರಲ್ ಸೆಕ್ರೇಟರಿಯಾಗಿದ್ದರು. ಕಳೆದ ಕೆಲವು ದಿನಗಳ ಹಿಂದೆ ಅವರು ಕೂಡ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ, ಅಹ್ಮದಿಯ್ಯತ್ ಅವರ ಅಜ್ಜ ಚೌಧರಿ ಗುಲಾಮ್ ಅಹ್ಮದ್ ಸಾಹಿಬ್ ಅಡ್ವೋಕೇಟ್ ಹಝ್ರತ್ ಮಾಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯವರ ಮೂಲಕ ಪ್ರವೇಶಿಸಿತು. ಅವರು 1971 ರಲ್ಲಿ ಪಾಕಿಸ್ತಾನ ಸೇನೆಯಲ್ಲಿ ಕಮಿಷನ್ ಪಡೆದರು. ನೀವು ಸೇವೆಯ ಸಮಯದಲ್ಲಿ ಜಮಾಅತ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಸೇವೆಯ ಸಮಯದಲ್ಲಿ, ಅವರು ತಮ್ಮ ಮನೆಯನ್ನು ವಿವಿಧ ಪಟ್ಟಣಗಳಲ್ಲಿ ಪ್ರಾರ್ಥನಾ ಕೇಂದ್ರವಾಗಿ ನೀಡಿದರು. ಅವರು ಜಮಾಅತ್ ಅನ್ನು ತುಂಬಾ ಪ್ರೀತಿಸುವ ಧೈರ್ಯಶಾಲಿ ಅಹ್ಮದಿ ಅಧಿಕಾರಿಯಾಗಿದ್ದರು. ನಿವೃತ್ತಿಯ ನಂತರ, ಅವರು ಯಾವಾಗಲೂ ಜಮಾಅತ್‌ನ ಸೇವೆಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಅವರು ಎಮಿರೇಟ್ ಕ್ಯಾಂಟ್ ಮತ್ತು ರಾವಲ್ಪಿಂಡಿ ಜಿಲ್ಲೆಯಲ್ಲಿ ವಿವಿಧ ಸೇವೆಗಳನ್ನು ಮಾಡಲು ಸಾಧ್ಯವಾಯಿತು. ಅವರು ಬಹಳ ಪ್ರಯತ್ನ ಮತ್ತು ಸಮರ್ಪಣಾಭಾವದಿಂದ ಜಮಾಅತ್‌ನ ಸೇವೆಗಳನ್ನು ನಿರ್ವಹಿಸುತ್ತಿದ್ದರು ಮತ್ತು ತಮ್ಮ ಸಹೋದ್ಯೋಗಿಗಳೊಂದಿಗೆ ಅತ್ಯಂತ ಗೌರವ ಮತ್ತು ನಮ್ರತೆಯಿಂದ ವರ್ತಿಸುತ್ತಿದ್ದರು ಮತ್ತು ಅವರ ಅಧಿಕಾರಿಗಳಿಗೆ ವಿಧೇಯರಾಗಿದ್ದರು. ಖಿಲಾಫತ್‌ನೊಂದಿಗೆ ಮಹಾ ನಿಷ್ಠೆ ಮತ್ತು ವಿಧೇಯತೆಯೊಂದಿಗೆ ಸಂಬಂಧ ಹೊಂದಿತ್ತು. ಪ್ರತಿ ಚಳವಳಿಗೂ ಸ್ಪಂದಿಸಿದವರು ಇದ್ದರು. ಅವರು ಬಡವರ ಬಗ್ಗೆ ಸಹಾನುಭೂತಿ ಹೊಂದಿದ್ದರು. ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಸದಾ ಸಿದ್ಧರಿದ್ದರು. ಅಲ್ಲಾಹನ ಅನುಗ್ರಹದಿಂದ ಮುಸಿಯಾಗಿದ್ದರು. ಅವರು ದುರ್ಬಲಗೊಂಡ ತಾಯಿ ಸಲೀಮಾ ಖುರ್ಷಿದ್ ಸಾಹಿಬಾ ಮತ್ತು ಇಬ್ಬರು ಹೆಂಡತಿಯರು ಮತ್ತು ಐದು ಮಕ್ಕಳನ್ನು ಅಗಲಿದ್ದಾರೆ. ಮಕ್ಕಳಲ್ಲಿ ನಾಲ್ವರು ಪುತ್ರಿಯರು ಹಾಗೂ ಒಬ್ಬ ಪುತ್ರ ಸೇರಿದ್ದಾರೆ. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ.

ಕೊನೆಯ ಪ್ರಸ್ತಾವನೆ ಪ್ರಸ್ತುತ ಡೆಲ್ಸ್ ಅಮೇರಿಕದಲ್ಲಿರುವ ಗ್ರೂಪ್ ಕ್ಯಾಪ್ಟನ್ ನಿವೃತ್ತ ಅಬ್ದುಲ್ ಶಕೂರ್ ಮಲಿಕ್ ಸಾಹಿಬ್ ಅವರದ್ದಾಗಿದೆ. ಅಲ್ಲಿ ಅವರು ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಅಜ್ಜ, ಗುಲಾಂ ನಬಿ ಶೇಖ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಯಾಗಿದ್ದರು. ಅವರ ಮೂಲಕ ಅಹ್ಮದೀಯತ್ ಅವರ ಹುಟ್ಟೂರಾದ ನೌಶೇರಾದಲ್ಲಿಯೂ ಬೋಧಿಸಲ್ಪಟ್ಟರು. ತಬ್ಲೀಗ್ ಮತ್ತು ಜಮಾಅತ್‌ನ ಪ್ರಭಾವ ಇತ್ತು. ದಿವಂಗತರಿಗೆ ಪಾಕಿಸ್ತಾನದ ವಾಯುಪಡೆಯಲ್ಲಿ ಇಂಜಿನಿಯರ್ ಆಗಿ ಮತ್ತು ನಂತರ ಗ್ರೂಪ್ ಕ್ಯಾಪ್ಟನ್ ಆಗಿ ಕೆಲಸ ಮಾಡುವ ಅವಕಾಶವಿತ್ತು. ರಾವಲ್ಪಿಂಡಿಯಲ್ಲಿ 15 ವರ್ಷಗಳ ಕಾಲ ಉಪ ಅಮೀರ್ ಆಗಿ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ, ನೀವು ಹಲವಾರು ಅಸೀರಾನ್ (ಬಂಧಿತರ) ಪ್ರಕರಣಗಳನ್ನು ಸಹ ಅನುಸರಿಸಿದ್ದೀರಿ. ಖಲೀಫರ ಜೊತೆ ನಿಕಟ ಸಂಪರ್ಕವಿತ್ತು. ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಜಮಾಅತ್‌ನ ವಿರೋಧದ ನಡುವೆಯೂ ಅವರು ಅಹ್ಮದಿಯಾ ಜಮಾಅತ್‌ನ ಗುರುತನ್ನು ಧೈರ್ಯದಿಂದ ಎತ್ತಿ ಹಿಡಿದಿದ್ದರು. ನಿವೃತ್ತಿಯ ನಂತರ ಅವರು ತಮ್ಮ ಜೀವನವನ್ನು ಜಮಾಅತ್‌ಗಾಗಿ ಮುಡಿಪಾಗಿಟ್ಟರು. ವಿಧೇಯತೆಯ ವ್ಯವಸ್ಥೆ ಮತ್ತು ಖಿಲಾಫತ್‌ನ ಅತ್ಯುನ್ನತ ಮಾದರಿಯನ್ನು ಸ್ಥಾಪಿಸಿದವರು ಅವರು. ಹಗಲು ರಾತ್ರಿ ಎನ್ನದೆ ಅಮೀರ್ ಜಮಾಅತ್ ನಿಂದ ಕರೆದರೂ ಅಥವಾ ಜಮಾಅತ್ ನಿಂದ ಕರೆದರೂ ತಕ್ಷಣ ಹಾಜರಾಗುತ್ತಿದ್ದರು. ಯಾವತ್ತೂ ನೆಪ ಹೇಳಲಿಲ್ಲ. ಅವರು ಉಪವಾಸ ಮತ್ತು ಸಲಾತ್‌ಗೆ ಬದ್ಧರಾಗಿದ್ದರು. ಎಲ್ಲರೂ ಅವರನ್ನು ಪ್ರೀತಿಸುತ್ತಿದ್ದರು. ಸಕಾರಾತ್ಮಕ ಪರಿಣಾಮ ಬೀರುವ ಮನುಷ್ಯರಾಗಿದ್ದರು.

ಅವರ ಪುತ್ರಿ ಶಾಝಿಯಾ ಸುಹೈಲ್ ಸಾಹಿಬ್ ಹೇಳುತ್ತಾರೆ: ನನ್ನ ತಂದೆ ಹೆಚ್ಚಿನ ಸಮಯವನ್ನು ಜಮಾಅತ್‌ನ ಕೆಲಸದಲ್ಲಿ ಕಳೆಯುತ್ತಿದ್ದರು. ಅವರು ಎಲ್ಲಿದ್ದರೂ, ಅವರ ನೆಚ್ಚಿನ ಸಮಯವೆಂದರೆ ನಮಾಝ್ ನಿರ್ವಹಿಸುವುದಾಗಿತ್ತು ಅಥವಾ ಜಮಾಅತ್‌ನ ಕೆಲಸವನ್ನು ಮಾಡುವುದಾಗಿತ್ತು. ಅವರು ಯಾವಾಗಲೂ ಅಲ್ಲಾಹನ ಅನುಗ್ರಹ ಮತ್ತು ಪ್ರಾರ್ಥನೆಗಳನ್ನು ಸ್ವೀಕರಿಸುವ ಘಟನೆಗಳನ್ನು ಹೇಳುತ್ತಿದ್ದರು. ಯಾವಾಗಲೂ ತಮ್ಮ ಮಕ್ಕಳನ್ನು ಒಟ್ಟಿಗೆ ಕೂರಿಸುವುದು ಮತ್ತು ಸರ್ವಶಕ್ತನಾದ ಅಲ್ಲಾಹನು ಅಹ್ಮದೀಯರೊಂದಿಗೆ ವಿಶೇಷ ಸಂಬಂಧವನ್ನು ಹೊಂದಿದ್ದಾರೆ ಎಂದು ಘಟನೆಗಳನ್ನು ವಿವರಿಸುತ್ತಿದ್ದರು. ಅಹ್ಮದೀಯರ ವ್ಯವಹಾರಗಳನ್ನು ಅಲ್ಲಾಹ್ ಹೇಗೆ ನಿರ್ವಹಿಸುತ್ತಾನೆ? ಎಲ್ಲಾ ಪ್ರಮುಖ ವಿಷಯಗಳಿಗೆ ಖಲೀಫತುಲ್ ಮಸೀಹ್‌ಗೆ ಪತ್ರಗಳನ್ನು ಬರೆಯಲು ನೀವು ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು. ಅವರು ಯಾವಾಗಲೂ ಎಲ್ಲ ವಿಷಯವನ್ನೂ ಬರೆಯಲು ಹೇಳುತ್ತಾರೆ. ನನ್ನ ತಂದೆಯ ವಿಶಿಷ್ಟ ಲಕ್ಷಣವೆಂದರೆ ಅಲ್ಲಾನಲ್ಲಿ ಸಂಪೂರ್ಣ ನಂಬಿಕೆ ಮತ್ತು ದೇವರ ಚಿತ್ತಕ್ಕೆ ವಿಧೇಯತೆಯಾಗಿತ್ತು ಎಂದು ಅವರು ಹೇಳುತ್ತಾರೆ. ನಾವು ಯಾವುದೇ ಹಣವನ್ನು ಪಡೆದಾಗ, ಅದರಿಂದ ಚಂದ ತೆಗೆದುಕೊಳ್ಳಬೇಕು ಎಂದು ಬಾಲ್ಯದಿಂದಲೂ ನಮಗೆ ಕಲಿಸಲಾಯಿತು. ಇದು ನಮ್ಮ ಆದಾಯವನ್ನು ಅನುಗ್ರಹಿಸುತ್ತದೆ ಮತ್ತು ಶುದ್ಧತೆಯನ್ನು ಹೆಚ್ಚಿಸುತ್ತದೆ. ದಿವಂಗತರು ಮೂಸಿಯಾಗಿದ್ದರು, ಮೂವರು ಪುತ್ರಿಯರು ಮತ್ತು ಒಬ್ಬ ಪುತ್ರರನ್ನು ಅಗಲಿದ್ದಾರೆ. ಅವರ ಪುತ್ರ ಡಾ. ಆಮೀರ್ ಸಾಹಿಬ್ ಅವರು ಅಮೇರಿಕದಲ್ಲಿ ವೈದ್ಯರಾಗಿದ್ದಾರೆ. ಅವರೂ ಜಮಾಅತ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ.

...*...*...*...

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಏಕೆಂದರೆ ತಾಯಿರಃ ಎಂದು ಹೇಳುವ ಮೂಲಕ, ಮನುಷ್ಯನು ತನ್ನ ಕ್ರಿಯೆಗಳ ಸೃಷ್ಟಿಕರ್ತ ಎಂದು ಹೇಳಲಾಗಿದೆ. ತಾಯಿರಃ ಎಂದು ಕರೆಯಲಾಗುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಒಳ್ಳೆಯ ಭವಿಷ್ಯ ಮತ್ತು ಕೆಟ್ಟ ಭವಿಷ್ಯವನ್ನು ಅವನ ಕುತ್ತಿಗೆಗೆ ಕಟ್ಟಲಾಗುತ್ತದೆ ಮತ್ತು ಅವನು ಇತರ ವಿಷಯಗಳಿಗೆ ಹೋಗಿ ಭವಿಷ್ಯವನ್ನು ಹುಡುಕುತ್ತಾನೆ ಎಂಬುದೇ ಈ ಅರ್ಥವೂ ಆಗಿರಬಹುದು. ಒಬ್ಬ ವ್ಯಕ್ತಿಯು ಒಳ್ಳೆಯದನ್ನು ಮಾಡಿದಾಗ ಅವನು ತಲೆ ಎತ್ತುತ್ತಾನೆ ಮತ್ತು ಅವನು ಕೆಟ್ಟದ್ದನ್ನು ಮಾಡಿದಾಗ ಅವನು ಅವಮಾನದಿಂದ ಕುತ್ತಿಗೆಯನ್ನು ತಗ್ಗಿಸುತ್ತಾನೆ ಎಂಬ ಕಾರಣದಿಂದ ಕುತ್ತಿಗೆ ಎಂಬ ಪದವನ್ನು ಬಳಸಲಾಗಿದೆ. ಆದ್ದರಿಂದ ಈ ಪದದ ಬಳಕೆಯು ಒಬ್ಬ ವ್ಯಕ್ತಿಯು ತನ್ನ ಕುತ್ತಿಗೆಯಿಂದ ತನ್ನ ಕಾರ್ಯಗಳನ್ನು ಮೌಲ್ಯಮಾಪನ ಮಾಡಬೇಕು ಎಂಬ ಅಂಶಕ್ಕೆ ಗಮನ ಸೆಳೆಯಲಾಗಿದೆ ಅಂದರೆ, ಅವನು ತನ್ನ ಗೆಳೆಯರು ಮತ್ತು ಸಹವರ್ತಿಗಳಲ್ಲಿ ತನ್ನ ಕುತ್ತಿಗೆಯನ್ನು ಎತ್ತರಕ್ಕೆ ಏರಿಸಬಹುದೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕು. ಅವನ ಹೃದಯ ಮತ್ತು ಅವನ ಗೆಳೆಯರು ಅವನನ್ನು ದೋಷರಹಿತ ಎಂದು ಘೋಷಿಸಿದರೆ, ಅವನ ಹೆಜ್ಜೆ ಒಳ್ಳೆಯತನದಲ್ಲಿದೆ ಎಂದು ಅರ್ಥಮಾಡಿಕೊಳ್ಳಬೇಕು. ಆದರೆ ಅವನ ಮನಸ್ಸು ಮತ್ತು ಅವನ ಗೆಳೆಯರು ಅವನಲ್ಲಿ ನೂರು ಕೊಳೆಯನ್ನು ಕಂಡುಕೊಂಡರೆ, ಜನರಲ್ಲಿ ಜಂಬಕೊಚ್ಚಿಕೊಳ್ಳುವದರಲ್ಲಿ ಏನು ಪ್ರಯೋಜನ?

**(ತಫ್ಸೀರ್ ಕಬೀರ್, ಸಂಪುಟ–4, ಪುಟ–312, ಪ್ರಕಟಿತ ಖಾದಿಯಾನ್ 2010)**

## *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್**.

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**


## *ವಿಶೇಶ ಸೂಚನೆ*

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

* ಶೈತಾನನ ದಾಳಿ ಎಷ್ಟೊಂದು ಪ್ರಬಲವಾಗಿದೆ ಎಂದರೆ ನಾವು ಸ್ವಯಂ ತಮ್ಮ ಪ್ರಯತ್ನಗಳಿಂದ ಉಳಿಯವುದು ಅಸಾಧ್ಯ. ನಮಗೆ ಅಲ್ಲಾಹನಿಂದ ಮಾರ್ಗದರ್ಶನ ಮತ್ತು ಸಹಾಯ ಪಡೆಯುವ ಅಗತ್ಯವಿದೆ. ಐದು ಹೊತ್ತಿನ ನಮಾಝುಗಳಲ್ಲಿ ಅಲ್ಲಾಹನು ತಮಗೆ ಶೈತಾನಿನ ಎಲ್ಲ ದಾಳಿಗಳಿಂದ ಮತ್ತು ಕುತಂತ್ರಗಳಿಂದ ರಕ್ಷಿಸುವಂತಾಗಲಿ ಎಂದು ದುಆ ಮಾಡುತ್ತಾ ಇರಿ. * ಇಸ್ತಿಗ್‌ಫಾರ್ ಅನ್ನು ಹೆಚ್ಚೆಚ್ಚು ಪಠಿಸುತ್ತಾ ಇರಿ. ಅದನ್ನು ತಮ್ಮಲ್ಲಿ ಮಾಮೂಲಾಗಿ ಅಳವಡಿಸಿಕೊಳ್ಳಬೇಕು * ಟೆಲಿವಿಷನ್, ಇಂಟರ್‌ನೆಟ್ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ತೋರಿಸಲಾಗುವ ಅಶ್ಲೀಲ ಕಾರ್ಯಕ್ರಮಗಳನ್ನು ನೋಡುವುದರಿಂದ ದೂರವಿರಬೇಕು * ತಮ್ಮ ಧಾರ್ಮಿಕ ಜ್ಞಾನ, ಜ್ಞನವನ್ನು ವೃದ್ಧಿಸಿಕೊಳ್ಳಲು ಪ್ರಯತ್ನಿಸಬೇಕು * **ಉತ್ತಮ ದಾಂಪತ್ಯ ಜೀವನ ನಡೆಸಲು ತಮ್ಮ ಸಹನಶಕ್ತಿಯನ್ನು ವೃದ್ಧಿಸಿಕೊಳ್ಳಬೇಕು** * ನೀವು ಈ ವಾಸ್ತವವನ್ನು ಅರಿತುಕೊಂಡರೆ, ನಾವು ಒಬ್ಬರು ಇನ್ನೊಬ್ಬರ ಕೊರತೆಗಳನ್ನು ಕಡೆಗಣಿಸುವ ಪ್ರವೃತ್ತಿ ಬೆಳೆಸಿಕೊಂಡರೆ, ತಲಾಖ್‌ಗಳ ಪ್ರಮಾಣ ತಗ್ಗಿಸಬಹುದಾಗಿದೆ * ಮುಂಜಾನೆ ಬೇಗ ಏಳಲು ಪ್ರಯತ್ನಿಸಬೇಕು * ದಿನಾಲೂ ನೀವು ಮಾಡುವ ಕೆಲಸಗಳನ್ನು ಬರೆದಿಟ್ಟುಕೊಳ್ಳಬೇಕು. ಇದರಿಂದ ನಿಮ್ಮ ಅರಿವಿಗೆ ಬರುವುದು. ನಿಮ್ಮ ಎಷ್ಟು ಸಮಯವು ಒಳ್ಳೆಯ ಮತ್ತು ಸಕಾರಾತ್ಮಕ ಕಾರ್ಯಗಳಲ್ಲಿ ವ್ಯಯಿಸಿರಿ ಮತ್ತು ಎಷ್ಟು ಸಮಯ ವ್ಯರ್ಥ ಮಾಡಿದಿರಿ ಎಂದು.

## ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರೊಂದಿಗೆ ನೈಜೇರಿಯಾದ ಅಹ್ಮದಿ ವಿದ್ಯಾರ್ಥಿನಿಯರು ಮತ್ತು ಲಜ್ನ ಇಮಾಅಲ್ಲಾಹ್ ಸದಸ್ಯರ ವರ್ಚುವಲ್ ಭೇಟಿ ಹಾಗೂ ಹುಝೂರ್ ಅನ್ವರ್(ಅತಬಿಅ) ಅವರ ಉಪಯುಕ್ತ ಉಪದೇಶಗಳು

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರು 26 ಸೆಪ್ಟೆಂಬರ್ 2021 ರಂದು ನೈಜೀರಿಯಾದ ಅಹ್ಮದಿ ವಿದ್ಯಾರ್ಥಿನಿಯರ, ಲಜ್ನ ಇಮಾಅಲ್ಲಾಹ್ ಸದಸ್ಯರೊಂದಿಗೆ ವರ್ಚನಲ್ ಭೇಟಿ ಮಾಡಿದರು. ಹುಝೂರ್ ಅನ್ವರ್(ಅತಬಿಅ) ಈ ಭೇಟಿಕ್ಕೊಸ್ಕರ ಇಸ್ಲಾಮಾಬಾದ್ (ಟೆಲ್ಫೋರ್ಡ್) ನಲ್ಲಿ ಸ್ಥಾಪಿತವಾದ MTA studio's ನಲ್ಲಿ ಆಗಮಿಸಿದರು. ಆಗ ವಿದ್ಯಾರ್ತಿನಿಯುರು, ಲಜ್ನ ಹಾಲ್ ಅಜೂಕೋರೊ, ಲೇಗೋಸ್ (ನೈಜೀರಿಯಾ) ಯಿಂದ ಆನ್‌ಲೈನ್ ಹಾಜರಾಗಿದ್ದರು. ಭೇಟಿಯ ಪ್ರಾರಂಭ ಪವಿತ್ರ ಖುರ್‌ಆನ್‌ನ ಪಠಣದಿಂದಾಯಿತು. ಅನಂತರ ಲಜ್ನ ಇಮಾಅಲ್ಲಾಹರಿಗೆ ಭೇಟಿಯು ನಡುವೆ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಪ್ರಶ್ನೆಗಳನ್ನು ಕೇಳುವ ಸೌಭಾಗ್ಯ ದೊರೆಯಿತು.

ಲಜ್ನ ಸದಸ್ಯರೊಬ್ಬರು ಪ್ರಶ್ನಿಸಿದರು. ಯಾವ ಪಾಪಗಳಿಗೆ ಮನುಷ್ಯನು ಗುರಿಯಾಗಿರುತ್ತಾನೆ. ಅದರಿಂದ ಹೇಗೆ ರಕ್ಷಿಸಿಕೊಳ್ಳಬಹುದು? ಹುಝೂರ್ ಅನ್ವರ್(ಅತಬಿಅ) ಹೇಳಿದರು. ಮೊದಲಾಗಿ ನೀವು ಅಲ್ಲಾಹನೊಡನೆ ನಿಯಮಿತವಾಗಿ ಐದು ಹೊತ್ತಿನ ನಮಾಝ್‌ಗಳಲ್ಲಿ ಪ್ರಾರ್ಥಿಸಿರಿ. ಅಲ್ಲಾಹನು ನಮಗೆ ಶೈತಾನಿನ ಎಲ್ಲಾ ದಾಳಿಗಳಿಂದ ಮತ್ತು ಶೈತಾನಿನ ಕುತಂತ್ರಗಳಿಂದ ರಕ್ಷಿಸುವಂತಾಗಲಿ ಎಂದು. ನಾವು ಪ್ರಸ್ತುತ ಕಾಲಘಟ್ಟದಲ್ಲಿ ಲೌಕಿಕ ಕೆಡಕುಗಳಲ್ಲಿ ಎಷ್ಟರಮಟ್ಟಿಗೆ ದುಷ್ಕೃತ್ಯಗಳಲ್ಲಿ ಮುಳುಗಿದ್ದೇವೆ ಎಂದರೆ ಇಂದು ಇಂಟರ್‌ನೆಟ್, ಟಿ.ವಿ. ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ತೋರಿಸಲಾಗುವ ಹೆಚ್ಚಿನ ಕಾರ್ಯಕ್ರಮಗಳು ನಮಗೆ ಸರಿಯಾದ ದಾರಿಯಿಂದ ಹಾಗೂ ನಿಜವಾದ ಇಸ್ಲಾಮಿ ಶಿಕ್ಷಣದಿಂದ ದೂರ ಮಾಡುತ್ತಿವೆ. ಇಂತಹ ಕಾರ್ಯಕ್ರಮಗಳ ಕಡೆಗೆ ನಾವು ವಾಲುತ್ತಿದ್ದೇವೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಆದ್ದರಿಂದ ಮೊದಲು ಮಾಡಬೇಕಾದುದೇನೆಂದರೆ, ಅಲ್ಲಾಹನಿಂದ ಸಹಾಯ ಯಾಚಿಸಬೇಕು. ಕೇವಲ ಅಲ್ಲಾಹನು ಮಾತ್ರ ನಮಗೆ ಶೈತಾನನಿಂದ ರಕ್ಷಿಸಬಹುದು. ಆದ್ದರಿಂದ ನಾವು ಅವೂಝು ಬಿಲ್ಲಾಹಿ ಮಿನಶೈತಾನಿರ್‌ರಜೀಮ್ ಎಂದು ಪಠಿಸುತ್ತೇವೆ. ಅಲ್ಲಾಹನು ನಮಗೆ ಆ ಧೂರ್ತ ಶೈತಾನನಿಂದ ರಕ್ಷಿಸಲಿ. ಈ ಐದು ಹೊತ್ತಿನ ನಮಾಝ್‌ಗಳಲ್ಲಿ ಪ್ರಾಮಾಣಿಕವಾಗಿ ತಮಗೋಸ್ಕರ ದುಆ ಮಾಡಿಕೊಳ್ಳಬೇಕು, ಅಲ್ಲಾಹನು ನಿಮಗೆ ಮತ್ತು ನಿಮ್ಮ ಸಹೋದರ ಸಹೊದರಿಯರಿಗೆ, ನಿಮ್ಮ ಕುಟುಂಬ ಸದಸ್ಯರಿಗೆ ಮತ್ತು ಜಮಾಅತಿನ ಬಂಧು ಮಿತ್ರರಿಗೆ, ಹೀಗೆ ತಮ್ಮ ದುಆ ವಿಸ್ತಾರಗೊಳ್ಳಬಹುದು. ಹೀಗೆ ನೀವು ಕೇವಲ ತಮ್ಮನ್ನು ರಕ್ಷಿಸಿಕೊಳ್ಳುವುದಂತೆ ಆಗುವುದಿಲ್ಲ. ಬದಲಿಗೆ ತಮ್ಮ ಅಕ್ಕಪಕ್ಕದ ವಾತಾವರಣವನ್ನು ಸಹ ರಕ್ಷಿಸಿದಂತಾಗುವುದು. ಮತ್ತು ಹೆಚ್ಚೆಚ್ಚಾಗಿ ಇಸ್ತಿಗ್‌ಫಾರ್ ಪಠಿಸುತ್ತಾ ಇರಿ. ಅದನ್ನು ತನ್ನ ಮಾಮೂಲಾಗಿ ಮಾಡಿಕೊಳ್ಳಿ, ನೀವು ದಿನಾಲೂ ಆದಷ್ಟು ಮಟ್ಟಿಗೆ ಇಸ್ತಿಗ್‌ಫಾರ್ ಪಠಿಸಿರಿ. ಟೆಲಿವಿಷನ್ ಅಥವಾ ಇಂಟರ್‌ನೆಟ್ ಅಥವ ಸಾಮಾಜಿಕ ಮಾಧ್ಯಮಗಳಲ್ಲಿ ತೋರಿಸಲಾಗುವ ಅಶ್ಲೀಲ ಕಾರ್ಯಕ್ರಮಗಳನ್ನು ನೋಡುವುದರಿಂದ ದೂರವಿರಬೇಕು. ಹೀಗೆ ನಿವು ತಮ್ಮನ್ನು ರಕ್ಷಿಸಿಕೊಳ್ಳಬಹುದು. ಅದರ ಜೊತೆಗೆ ತಮ್ಮ ಧಾರ್ಮಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಅದಕ್ಕಾಗಿ ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಾ ಇರಿ. ಪವಿತ್ರ ಖುರ್‌ಆನ್‌ನಲ್ಲಿ ಯಾವ ಆದೇಶಗಳನ್ನು ನೀಡಲಾಗಿದೆ. ಅದನ್ನು ಬರೆದುಕೊಳ್ಳಬೇಕು, ನಾವು ಏನು ಮಾಡಬೇಕಾಗಿದೆ ಮತ್ತು ಏನು ಮಾಡಬಾರದು. ಅದರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು. ಅದರ ಜೊತೆ ಜೊತೆಗೆ ಇಂದಿನ ಕಾಲದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಕಳುಹಿಸಿರುವನು. ಧರ್ಮದ ಪುನರ್‌ಜ್ಜೀವನಕ್ಕಾಗಿ ಮತ್ತು ನಮಗೆ ಪವಿತ್ರ ಖುರ್‌ಆನ್‌ನ ನಿಜವಾದ ಶಿಕ್ಷಣ ಹಾಗೂ ಹಝ್ರತ್ ಪೈಗಂಬರ್(ಸ) ಅವರ ನಡವಳಿಕೆ (ಸುನ್ನತ್) ಹಾಗೂ ಹದೀಸುಗಳನ್ನು ಅನುಸರಿಸಲು. ಹೀಗೆ ಅವರು(ಅ) ಈ ಪೈಕಿ ಸುಂದರವಾದ ವ್ಯಾಖ್ಯಾನಗಳನ್ನು ತಮ್ಮ ಗ್ರಂಥಗಳಲ್ಲಿ ಬರೆದಿರುವರು.

ಆದ್ದರಿಂದ ಯಾವ ಗ್ರಂಥವು ಇಂಗ್ಲಿಷಿನಲ್ಲಿ ಲಭ್ಯವಾದರೆ, ಆ ಗ್ರಂಥದ ಕೆಲ ಭಾಗಗಳನ್ನು ದಿನಾಲೂ ಓದುವ ಪ್ರಯತ್ನ ಮಾಡಬೇಕು. ಹೀಗೆ ತಮ್ಮ ಧಾರ್ಮಿಕ ಜ್ಞಾನ ಸಹ ವೃದ್ಧಿಸಿಕೊಳ್ಳಬಹುದು. ಒಟ್ಟಿನಲ್ಲಿ ನಮಗೆ ಪರಿಶ್ರಮಪಡಬೇಕಾಗಿದೆ. ಈ ಮೂಲಕ ನಾವು ದುಷ್ಕೃತ್ಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬಹುದು. ಇಂದಿನ ಪಾಪಗಳಿಂದ ದೂರವಿರಬಹುದು. ಇಲ್ಲದಿದ್ದರೆ ಶೈತಾನನ ದಾಳಿಗಳು ಎಷ್ಟೊಂದು ಪ್ರಬಲವಾಗಿದೆ ಎಂದರೆ ತಾವು ಕೇವಲ ತಮ್ಮ ಪ್ರಯತ್ನಗಳಿಂದ ಮತ್ತು ತಮ್ಮ ಶ್ರಮದಿಂದ ಉಳಿದಿರಲು ಸಾಧ್ಯವಿಲ್ಲ. ಈ ಪೈಕಿ ನಮಗೆ ಲಲ್ಲಾಹನಿಂದ ಮಾರ್ಗದರ್ಶನ ಹಾಗೂ ಸಹಾಯ ಪಡೆಯುವ ಅಗತ್ಯವಿದೆ.

ಲಜ್ನ ಸದಸ್ಯೆಯೊಬ್ಬರು ಪ್ರಶ್ನೆ ಕೇಳಿದರು. ನಮ್ಮ ಪರಿಸರದಲ್ಲಿ ತಲಾಖ್ (ವಿಚ್ಛೇದನೆ) ಪ್ರಮಾಣ ಹೆಚ್ಚಾಗಿ ಬೆಳೆಯುತ್ತಾ ಇದೆ. ಈ ನಿಮಿತ್ತ ವಿವಾಹಿತರಿಗೆ ನಿಮ್ಮ ಸಲಹೆ ಏನು?

ಹುಝೂರ್ ಅನ್ವರ್(ಅತಬಿಅ) ಹೇಳಿದರು. ನಿಮಗೆ ಎಂದರೆ ಹುಡುಗರು, ಹುಡುಗಿಯರು, ಇಬ್ಬರೂ ತಮ್ಮ ಸಹನಶಕ್ತಿ ವೃದ್ಧಿಸಿಕೊಳ್ಳಬೇಕು. ಯಾರೊಬ್ಬ ಹುಡುಗ ಅಥವಾ ಹುಡುಗಿಯರಿಂದ ಈ ಪ್ರಮಾಣ ಹೆಚ್ಚಾಗುತ್ತಾ ಇದೆ ಎಂದು ಹೇಳಲಾಗದು. ಇಬ್ಬರಲ್ಲಿಯೂ ನ್ಯೂನತೆಗಳಿರುತ್ತದೆ. ಒಳ್ಳೆಯ ದಾಂಪತ್ಯ ಜೀವನ ನಡೆಸಲು ತಮ್ಮ ಸಹನಶಕ್ತಿಯು ಮಟ್ಟ ಉನ್ನತಗೊಳಿಸಬೇಕು. ಮತ್ತು ತಮ್ಮ ಜೋಡಿ (ಹೆಂಡತಿ ಅಥವಾ ಗಂಡ) ನ ನ್ಯೂನತೆಯನ್ನು ಕಡೆಗಣಿಸಬೇಕು. ಗಂಡನು ಸಹ ಕಡೆಗಣಿಸಬೇಕು ಮತ್ತು ಹೆಂಡತಿಯೂ ಸಹ. ಒಳ್ಳೆಯದ್ದನ್ನು ಹುಡುಕುವ ಪ್ರಯತ್ನ ಮಾಡಬೇಕು ಒಬ್ಬನು ಕೇವಲ ದುರ್ಗುಣಗಳೇ ಹೊಂದಿದ್ದಾನೆ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಯೊಬ್ಬರಲ್ಲಿ ಸದ್ಗುಣಗಳೂ ಇರುತ್ತವೆ. ದುರ್ಗುಣಗಳೂ ಇರುತ್ತವೆ. ಗಂಡಸರಲ್ಲಿಯೂ ಸದುಗಣಗಳಿರುತ್ತವೆ. ಮಹಿಳೆಯರಲ್ಲೂ ಸದ್ಗುಣಗಳು ಇರುತ್ತವೆ. ಆದ್ದರಿಂದ ನೀವು ಈ ವಾಸ್ತವವನ್ನು ತಿಳಿದುಕೊಳ್ಳಬೇಕು. ನಮಗೆ ಪರಸ್ಪರ ನ್ಯೂನ್ಯತೆಗಳನ್ನು ಕಡೆಗಾಣಿಸಬೇಕಾಗಿದೆ. ಆಗ ತಲಾಖ್‌ನ ಪ್ರಮಾಣ ತಗ್ಗಿಸಬಹುದಾಗಿದೆ. ನೀವು ಒಳ್ಳೆಯ ದಾಂಪತ್ಯ ಜೀವನ ನಡೆಸುವವರಾಗುವಿರಿ. ಈಗ ತಮ್ಮ ಮಕ್ಕಳಿಗೆ ಶಾಂತಿಪೂರ್ಣ ವಾತಾವರಣ ಒದಗಿಸುವುದು ನಿಮ್ಮ ಕರ್ತವ್ಯವಾಗಿದೆ. ಅವರ ಹಿತಕ್ಕಾಗಿ ಅವರ ಉತ್ತಮ ಬೆಳವಣಿಗೆಗಾಗಿ. ಇದು ಗಂಡ ಹೆಂಡತಿ ಶಾಂತಿಪೂರ್ಣ ಹಾಗೂ ಮಿತ್ರರೂಪದಲ್ಲಿ ಜೀವನ ನಡೆಸಿದಾಗ ಮಾತ್ರ ಸಾಧ್ಯವಾಗುವುದು.

ಲಜ್ನ ಸದಸ್ಯರೊಬ್ಬರು ಕೇಳಿದರು. ಹುಝೂರ್, ನೀವು ಲೋಕದಲ್ಲಿ ಅತ್ಯಧಿಕ ಕಾರ್ಯಶೀಲ ವ್ಯಕ್ತಿಯಾಗಿದ್ದೀರಿ. ಅದಾಗಲೂ ಅತ್ಯಂತ ಚಾಕಚಕ್ಯತೆಯಿಂದ ತಮ್ಮ ಸಮಯವನ್ನು ಕಳೆಯುತ್ತೀರಿ. ದಯವಿಟ್ಟು ನಮಗೆ ತಿಳಿಸಿಕೊಡಿ. ನೀವು ಹೇಗೆ ತಮ್ಮ ಸಮಯವನ್ನು ಅಷ್ಟೊಂದು ಉತ್ತಮ ರೀತಿಯಲ್ಲಿ ಕಳೆಯುತ್ತೀರಿ. ನಮಗೆ ಉಪದೇಶ ನೀಡಿರಿ. ವಿದ್ಯಾರ್ಥಿನಿಯರಾದ ನೆಲೆಯಲ್ಲಿ ನಾವು ನಮ್ಮ ಸಮಯ ಹೇಗೆ ಉತ್ತಮವಾಗಿ ಬಳಸಿಕೊಳ್ಳಬಹುದು.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ನೀವು ಓರ್ವ ವಿದ್ಯಾರ್ಥಿನಿ, ಮುಂಜಾನೆ ಬೇಗ ಏಳಲು ಪ್ರಯತ್ನ ಮಾಡಬೇಕು. ಇದು ಅತ್ಯಗತ್ಯವಾದ

ಮಾತು. ನಿಮಗೆ ಅನಿವಾರ್ಯವಾಗಿ ತಡರಾತ್ರಿ ಮಲಗಬೇಕಾಯಿತೆಂದರೆ ಸರಿ. ಇಲ್ಲವಾಗಿದ್ದಲ್ಲಿ ಬೇಗ ಮಲಗಲು ಪ್ರಯತ್ನಿಸಬೇಕು.

Early to bed and early to rise, make a man healthy, wealthy and wise.

(ಬೇಗ ಮಲಗುವುದು ಮತ್ತು ಬೇಗ ಏಳುವುದು, ಮನುಷ್ಯನಿಗೆ ಆರೋಗ್ಯವಂತನಾಗಿ ಶ್ರೀಮಂತನನ್ನಾಗಿ ಹಾಗೂ ವಿವೇಕಯುತನನ್ನಾಗಿ ಮಾಡುತ್ತದೆ)

ತದನಂತರ ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅಲ್ಲಾಹನಿಂದ ಸಹಾಯ ಯಾಚಿಸಬೇಕು. ಅಲ್ಲಾಹನು ನಮಗೆ ಸರಿಯಾದ ರೀತಿಯಲ್ಲಿ ಜೀವನ ನಡೆಸುವ ಸೌಭಾಗ್ಯ ನೀಡಲಿ. ತಮ್ಮನ್ನು ತಾವು ಶಿಸ್ತುಪಾಲನೆಯ ಭಾಗ್ಯ ದಯಪಾಲಿಸು. ನಮಾಝ್‌ಗಳ ನಂತರ ನಿಮಗೆ ಓರ್ವ ವಿದ್ಯಾರ್ಥಿಯ ನೆಲೆಯಲ್ಲಿ ಆರು ಗಂಟೆ ನಿದ್ರೆ ಮಾಡಬೇಕಾಗಿದೆ. ಕನಿಷ್ಠಪಕ್ಷ ಆರು ಗಂಟೆಯ ನಿದ್ರೆ ಪೂರ್ತಿಯಾಗಬೇಕು. ಅದಾದ ನಂತರ ನೀವು ಅಧ್ಯಯನ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ತೊಡಗಬಹುದು. ದಿನವೆಲ್ಲ ನಿವು ಏನು ಮಾಡಿದ್ದೀರಿ ತಿಳಿಯಲಾಗುವುದಿಲ್ಲ. ಆದ್ದರಿಂದ ದಿನದ ಪ್ರಾರಂಭದಿಂದಲೇ ನೀವು ಮಾಡುವುದನ್ನೆಲ್ಲ ಬರೆದಿಟ್ಟುಕೊಳ್ಳಿ. ನೀವು 6 ಗಂಟೆಗೆ ಏಳಿದ್ದೀರಿ ಎಂದಾದರೆ, ನನಗೆ ಗೊತ್ತಿಲ್ಲ. ನಿಮ್ಮಲ್ಲಿ ನಮಾಝಿನ ಸಮಯವೇನಿದೆ. ಒಟ್ಟಿನಲ್ಲಿ ಫಜರ್ ನಮಾಝ್ ಸಮಯಕ್ಕೆ ಏಳಿದರೆ, ನಾನು ಇಷ್ಟು ಗಂಟೆಗೆ ಏಳಿದ್ದೇನೆ ಮತ್ತು ನಮಾಝ್ ನಿರ್ವಹಿಸಿದೆ. ಪವಿತ್ರ ಖುರ್‌ಆನ್‌ನ ಕೆಲ ವಚನಗಳನ್ನು ಪಠಿಸಿದೆ ಅಥವಾ ಯಾವ ಭಾಗವನ್ನು ಪಠಿಸಿದ್ದೀರಿ, ಮತ್ತು ಮಾಡಿರುವ ಕೆಲಸ, ಉದಾಹರಣೆಗೆ, ಉಪಹಾರಮಾಡಿದೆ, ಯೂನಿವರ್ಸಿಟಿ ಹೊಗಲು ತಯಾರಿ, ಯೂನಿವರ್ಸಿಟಿ ಹೋದೆ, ಯೂನಿವರ್ಸಿಟಿ ಹೋಗಲು ಒಂದು ಗಂಟೆ ಹಿಡಿಯಿತು. ನೀವು ಹಾಸ್ಟೆಲ್‌ನಲ್ಲಿದ್ದರೆ ಆ ಮಾತು ಬೇರೆ. ಈ ಸಮಯದಿಂದ ಈ ಸಮಯದವರೆಗೆ ಯೂನಿವರ್ಸಿಟಿಯಲ್ಲಿ ಇದ್ದೆ. ಮತ್ತು ಮನೆಗೆ ಮರಳಿದ್ದೇನೆ. ತಮ್ಮ ಪಾಠಗಳನ್ನು ಪುನರಾವರ್ತಿಸಿದ್ದೇನೆ. ನಮಾಝ್ ನಿರ್ವಹಿಸಿದೆ. ಇದು ಮಾಡಿದೆ. ಅದು ಮಾಡಿದೆ, ದಿನವೆಲ್ಲ ಏನೇನು ಮಾಡಿದೆವು. ಅವೆಲ್ಲ ಅವಶ್ಯವಾಗಿ ಬರೆಯಬೇಕು. ಇದರಿಂದ ನಿಮಗೆ ತಿಳಿದುಬರುವುದು ನಮ್ಮ ದಿನನಿತ್ಯದ ಕೆಲಸಗಳೇನಾಗಿವೆ ಎಂದು. ನಾನು ಇಷ್ಟು ಹೊತ್ತು ಒಳ್ಳೆಯ ಹಾಗೂ ಸಕಾರಾತ್ಮಕ ಕಾರ್ಯಗಳಲ್ಲಿ ಕಳೆದಿದ್ದೇನೆ ಹಾಗೂ ಎಷ್ಟು ಹೊತ್ತು ಸಿನಿಮಾ ನೋಡಲು, ಸಾಮಾಜಿಕ ಮಾಧ್ಯಮ ಮತ್ತು ಇಂಟರ್‌ನೆಟ್ ನೋಡಲು ವ್ಯರ್ಥಗೊಳಿಸಿದ್ದೇನೆ. ಹೀಗೆ ನಿಮಗೆ ತಿಳಿದುಬರುವುದು. ಯಾವ ಯಾವ ಒಳ್ಳೆಯ ಕಾರ್ಯಗಳನ್ನು ಮಾಡಿದ್ದೀರಿ ಮತ್ತು ಯಾವ ಯಾವ ಅಗತ್ಯವಿಲ್ಲದ ಕಾರ್ಯಗಳನ್ನು ಮಾಡಿದ್ದೀರಿ ಎಂದು. ಮತ್ತು ಹೇಗೆ ಸಮಯಪಾಲನೆ ಮಾಡಬಹುದಾಗಿದೆ ಎಂದು. ಆದ್ದರಿಂದ ಸಾಪ್ತಾಹಿಕ ರೂಪದಲ್ಲಿ ನಿಮ್ಮ ಕಾರ್ಯಕ್ರಮ ಪಟ್ಟಿ ಅಥವಾ ಕಾರ್ಯಯೋಜನೆ, ಮುಂಜಾನೆಯಿಂದ ಸಾಯಂಕಾಲದವರೆಗೆ ಅವಶ್ಯವಾಗಿ ಬರೆಯಬೇಕು. ಇದರಿಂದ ತಿಳಿದುಬರುವುದು. ಸಕಾರಾತ್ಮಕ ಕಾರ್ಯಗಳೇನಾಗಿವೆ ಮತ್ತು ನಕಾರಾತ್ಮಕ ಕಾರ್ಯಗಳೇನಾಗಿವೆ ಎಂದು. ಹೀಗೆ ನೀವು ಕಲಿಯಬಹುದು ಮತ್ತು ನಿಧಾನವಾಗಿ ಉತ್ತಮವಾಗಿ ಸಮಯ ಬಳಸಬಹುದು.

ಇನ್ನೋರ್ವ ಲಜ್ನ ಸದಸ್ಯೆ ಕೇಳಿದರು. ಹುಝೂರ್ ವಿದ್ಯಾರ್ಥಿನಿಯರಿಗೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ಯಾವ ಯಾವ ಗ್ರಂಥಗಳನ್ನು ಓದಲು ಹೇಳುವಿರಿ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ನಿಮಗೆ ಇಸ್ಲಾಮಿ ಉಸೂಲ್ ಕೀ ಫಿಲಾಸಫಿ (ಇಸ್ಲಾಂ ಧರ್ಮ ತತ್ವಜ್ಞಾನ) ಓದಬೇಕಾಗಿದೆ. ಇದು ನಿಮಗೆ ಇಸ್ಲಾಂ ಧರ್ಮದ ನಿಜವಾದ ಶಿಕ್ಷಣ ತಿಳಿದುಬರುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿವಿಧ ಗ್ರಂಥಗಳಿಂದ, ವಿವಿಧ ವಿಷಯಗಳನ್ನು, ಕೆಲವು ಆಧ್ಯಾಪನೆಗಳ ಸಂಗ್ರಹಣವಾಗಿದೆ. ಅದನ್ನು ಕೆಲ ಸಂಪುಟಗಳಲ್ಲಿ ಕ್ರೂಢೀಕರಿಸಲಾಗಿದೆ. ಅದರ ಹೆಸರು "Essence of Islam" ಎಂದಿದೆ. ಅದನ್ನು ಓದಿರಿ. ಒಂದೊಂದು ಸಂಪುಟದಲ್ಲಿ ಹಲವು ವಿಷಯಗಳಿವೆ. ನಮ್ಮ ಇಚ್ಛೆಯ ವಿಷಯ ಆರಿಸಿಕೊಳ್ಳಬಹುದಾಗಿದೆ. ಹೀಗೆ ನಿಮಗೆ ಧಾರ್ಮಿಕ ಜ್ಞನ ಪಡೆಯುವ ಆಸಕ್ತಿ ಮಾಡುವುದು.

ಇನ್ನೋರ್ವ ಲಜ್ನ ಸದಸ್ಯೆ ಪ್ರಶ್ನೆ ಕೇಳಿದರು. ಓರ್ವ ನೇತಾರರಲ್ಲಿ ಇತರರಿಗೆ ಮಾದರಿಯಾಗಲು ಯಾವ ಯಾವ ಗುಣಗಳಿರಬೇಕಾಗಿದೆ?

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಇದರಿಂದ ನಿಮ್ಮ ಉದ್ದೇಶ ಒಬ್ಬ ರಾಜಕೀಯ ನೇತಾರ ಅಥವಾ ನಿಮ್ಮ ದೇಶದ ನೇತಾರನಾಗಿದ್ದರೆ ಅವರಿಗೆ ಪ್ರಾಮಾಣಿಕರಾಗಿರಬೇಕಾಗುವುದು. ಅವರಿಗೆ ಜನರ ಸಂಕಷ್ಟಗಳ ಬಗ್ಗೆ ಅರಿವಿರಬೇಕು. ಅವರು ಜನತೆಯ ಧನದಿಂದ ತಮ್ಮ ಆಕಾಂಕ್ಷೆಗಳನ್ನು ಈಡೇರಿಸಕೊಂಡರೆ ಮತ್ತು ತಮ್ಮ ದೇಶದಲ್ಲಿ ಹಾಗೂ ಇತರ ದೇಶಗಳಲ್ಲಿ Bank Balance ಹೆಚ್ಚಿಸಿಕೊಂಡರೆ ಅವರು ಒಳ್ಳೆಯ ನೇತಾರರಲ್ಲ. ನೀವು ಒಳ್ಳೆಯ ನೇತಾರರಾಗಬಯಸಿದರೆ ಪ್ರಾಮಾಣಿಕರಾಗಿರಬೇಕು. ತಮ್ಮ ಜನರ ಬಗ್ಗೆ ವಿಚಾರ ಮಾಡಬೇಕು. ಇವು ಉತ್ತಮ ಗುಣಗಳಾಗಿವೆ. ನ್ಯಾಯದಿಂದ ವರ್ತಿಸಬೇಕು. ಆದ್ದರಿಂದ ಓರ್ವ ನೇತಾರನಿಗೆ ಪ್ರಾಮಾಣಿಕರಾಗಿರಬೇಕಾಗಿದೆ ಮತ್ತು ಎಲ್ಲ ರೀತಿಯಿಂದಲೂ ಪೂರ್ಣ ರೀತಿಯಲ್ಲಿ ನ್ಯಾಯದ ಮೇಲೆ ನೆಲೆನಿಲ್ಲಬೇಕಾಗಿದೆ. ಶ್ರಮವಂತನಾಗಬೇಕಾಗಿದೆ. ಸಮುದಾಯ ಮತ್ತು ದೇಶದ ಬಗ್ಗೆ ನಿಷ್ಠಾವಂತನಾಗಿರಬೇಕಾಗಿದೆ. ಇವೇ ಗುಣಗಳಾಗಿವೆ. ನಿಮ್ಮ ನೇತಾರರಲ್ಲಿ ಈ ಗುಣಗಳಿದ್ದರೆ ಅವನು ಒಬ್ಬ ಉತ್ತಮ ನೇತಾರನೆನ್ನಬಹುದು. ಇಲ್ಲದಿದ್ದರೆ, ನಾನು ಭರವಸೆ ಹೊಂದಿದ್ದೇನೆ, ಭವಿಷ್ಯದಲ್ಲಿ ಅಹ್ಮದಿಯರು ಒಳ್ಳೆಯ ನೇತಾರರಾಗಿ ಮುಂಬರಬೇಕಾಗಿದೆ. ಏಕೆಂದರೆ ತಮ್ಮ ದೇಶವನ್ನು ಉತ್ತಮ ರೀತಿಯಲ್ಲಿ ನಡೆಸುವಂತಾಗಬೇಕು.

ನೀವು ಆಧ್ಯಾತ್ಮಿಕ ನೇತಾರನು ಮಾತನಾಡುತ್ತಿದ್ದರೆ, ಓರ್ವ ಆಧ್ಯಾತ್ಮಿಕ ನೇತಾರನಲ್ಲೂ ಇಂತಹುದೇ ಗುಣಗಳಿರಬೇಕಾಗಿದೆ. ಇದು ಒಂದು ಸಂಘಟನೆಯ ನೇತಾರನ ಮಾತಾಗಿದ್ದರೆ, ನಿಮ್ಮ ಅಮೀರ್‌ನ ಮಾತಾಗಿದ್ದರೆ, ನಿಮ್ಮ ಈ ಸದರ್ ಜಮಾಅತಿನ ಮಾತಾಗಿದ್ದರೆ ಅವರಲ್ಲಿಯೂ ಇಂತಹ ಗುಣಗಳಿರಬೇಕಾಗಿದೆ.

ಭೇಟಿಯ ಕೊನೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಹೇಳಿದರು. ಈಗ ಭೇಟಿಯ ಸಮಯ ಮುಕ್ತಾಯಗೊಂಡಿದೆ. ಯಾರಿಗೆ ಪ್ರಶ್ನೆ ಕೇಳುವ ಅವಕಾಶ ದೊರೆಯಲಿಲ್ಲ. ಅವರು ಮುಂದಿನ ಸಲ ಕೇಳಬಹುದಾಗಿದೆ. ಇನ್‌ಶಾ ಅಲ್ಲಾಹ್.

ಅಲ್ಲಾಹ್ ಹಾಫಿಝ್. ಅಸ್ಸಲ್ಲಾಮು ಅಲೈಕುಂ ವರಹಮತುಲ್ಲಾಹಿ ವ ಬರಕಾತುಹು

**(ಧನ್ಯವಾದಗಳೊಂದಿಗೆ ಅಖ್ಬಾರ್ ಅಲ್‌ಫಿಝಲ್ ಇಂಟರ್ ನ್ಯಾಷನಲ್ 12 ಅಕ್ಟೋಬರ್ 2021)**

## ಪ್ರಮುಖ ಪ್ರಕಟಣೆ: ಅಹ್ಮದಿ ವಿದ್ಯಾರ್ಥಿಗಳ ಗಮನಕ್ಕೆ

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಪವಿತ್ರ ವಿದ್ಯಾಸಂಸ್ಥೆಯಾಗಿದೆ. ಅಲ್ಲಿ ಇಲ್ಲಿಯವರೆಗೆ ನೂರಾರು ಉಲಮಾಅ್ ಮತ್ತು ಮುಬಲ್ಲಿಗ್ ನವರು (ವಿದ್ವಾಂಸರು) ವಿದ್ಯಾವಂತರಾಗಿ ಇಸ್ಲಾಮಿನ ನಿಜವಾದ ಶಿಕ್ಷಣಗಳನ್ನು ಲೋಕದ ಮೂಲೆ ಮೂಲೆಯವರೆಗೆ ತಲುಪಿಸುವ ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಲವಾರು ಸಂದರ್ಭಗಳಲ್ಲಿ ಅಹ್ಮದಿ ವಿದ್ಯಾರ್ಥಿಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ವಿದ್ಯಾಸಂಸ್ಥೆಯಿಂದ ಶಿಕ್ಷಣ ಪಡೆದು ಸಂಘಟನೆಯ ಸೇವೆ ಸಲ್ಲಿಸಲು ಗಮನ ಸೆಳೆದಿದ್ದಾರೆ. ಆದ್ದರಿಂದ ಸಯ್ಯಿದುನಾ ಹುಝೂರೆ ಅನ್ವರ್(ಅಅಬಿಅ) ರವರ ನಿರ್ದೇಶನಗಳ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ವಾಖಿಫೀನ್ ನೌ ಮತ್ತು ವಾಖಿಫೀನೇತರರು ವಿದ್ಯಾರ್ಥಿಗಳು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆದು ಧಾರ್ಮಿಕ ಜ್ಞಾನ ಪಡೆದು ಸಂಘಟನೆಗೆ ಸೇವೆ ನೀಡಲು ಮುಂದಾಗಬೇಕಾಗಿದೆ. ಹೀಗೆ ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಬಯಸುವವರು– ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ವಿಭಾಗದೊಡನೆ ಸಂಪರ್ಕಿಸಿರಿ. ಶೀಘ್ರ, ಅತೀ ಶೀಘ್ರವಾಗಿ ಜಾಮಿಯಾ ಅಹ್ಮದಿಯಾಗೆ ಪ್ರವೇಶ ಅರ್ಜಿ ತುಂಬಿ ದಿನಾಂಕ: 30 ಜೂನ್ ವರೆಗೆ ದಫ್ತರ್ ವಖ್ಫೆ ನೌ ಭಾರತ (ನಝಾರತ್ ತಅ್‌ಲೀಮ್) ಗೆ ಕಳುಹಿಸತಕ್ಕದ್ದು.

ಪ್ರವೇಶ ಪಡೆಯಲು ಕೆಳಗೆ ನಮೂದಿಸಿದ ಷರತ್ತುಗಳಿವೆ:

(1) ಮೆಟ್ರಿಕ್ ಪಾಸ್ ವಿದ್ಯಾರ್ತಿಗಳಿಗಾಗಿ ವಯಸ್ಸು ಮಿತಿ 17 ವರ್ಷ ಮತ್ತು +2 ಪಾಸ್ ಆದವರಿಗೆ ವಯೋಮಿತಿ 19 ವರ್ಷ.

(2) ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆಯಲು ನ್ಯಾಷನಲ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ ವಿದ್ಯಾರ್ಥಿಗಳ ಸಂದರ್ಶನ (Interview) ಮತ್ತು ಲಿಖಿತ ಪರೀಕ್ಷೆ (written test) ತೆಗೆದುಕೊಳ್ಳಲಾಗುವುದು ಮತ್ತು ಜಾಮಿಯಾ ಅಹ್ಮದಿಯಾಗಾಗಿ ಅವರನ್ನು Select ಮಾಡಿಕೊಳ್ಳುವುದು. ಲಿಖಿತ ಪರೀಕ್ಷೆಯಲ್ಲಿ ಪವಿತ್ರ ಖುರ್‌ಆನ್, ಇಸ್ಲಾಂ, ಅಹ್ಮದಿಯತ್, ಧಾರ್ಮಿಕ ಜ್ಞಾನ, ಉರ್ದು, ಇಂಗ್ಲೀಷ್, ಸಾಮಾನ್ಯ ಜ್ಞಾನ (General Knowledge) ಕುರಿತು ಪ್ರಶ್ನೆಗಳನ್ನು ಇರಿಸಲಾಗುವುದು.

(3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ವಿದ್ಯಾರ್ತಿಗಳಿಗೆ ನೂರ್ ಹಾಸ್ಪಿಟಲ್ ಖಾದಿಯಾನ್‌ನಿಂದ ಆರೋಗ್ಯ ತಪಾಸಣೆ (Medical Test) ನಡೆಸಲಾಗುವುದು. ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಆರೋಗ್ಯ ತಪಾಸಣೆಯಲ್ಲಿ ಪಾಸಾದವರ ವಿದ್ಯಾರ್ಥಿಗಳನ್ನು ಸಯ್ಯಿದುನಾ ಹುಝೂರೆ ಅನ್ವರ್(ಅಬಿಅ) ಅವರ ಅನುಮತಿ ಪಡೆದು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ನೀಡಲಾಗುವುದು.

(4) ಪದವಿದಾರರು (Gradudate) ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಕ್ಕಾಗಿ ಆಧ್ಯತೆ ನೀಡಲಾಗುವುದು.

**Addmission Form ಅನ್ನು E-Mail ಮೂಲಕ ಪಡೆಯಲು:**

**waqfenau@qadian.in**

**WAQE-E-NAU DEPARTMENT (NAZARAT TALEEM)**

**DARUL BALAGH, CIVIL LINE, QADIAN.**

**Distt. GURDASPUR, PUNJAB (INDIA), PIN: 143516**

**CONTACT: 01872–500975, 9988991775**

**(ಸದರ್ ನ್ಯಾಷನಲ್ ಕೇರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 22 June 2023, Issue No. 25

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-22ರ ಉಳಿದ ಭಾಗ ಮುಂದುವರಿಸಲಾಗಿದೆ)*

ಅನಂತರ ಮಹಿಳಾ ವಿಜ್ಞಾನಿಗಳ ಪರವಾಗಿ ಡಾ. ಶಹ್ನಾಝ್ ಬಟ್ ಸಾಹಿಬ್ ನಮ್ಮ ಸಂಶೋಧನೆಯ ಕುರಿತು ಹೇಳಿದರು. ಅವರು P.H.D. ಆಗಿದ್ದಾರೆ. ಸೆಂಟ್ ಜೋಸೆಫ್ ವಿಶ್ವವಿದ್ಯಾನಿಲಯದಲ್ಲಿ ಪ್ರೋಫೆಸರ್ ಆಗಿದ್ದಾರೆ ಮತ್ತು ಅದೇ ವಿಶ್ವವಿದ್ಯಾನಿಲಯದಲ್ಲಿ (Neuropsyche phraamodology lab, Director ಅಗಿದ್ದಾರೆ. ಅವರು ತಿಳಿಸಿದರು. ವಿವಿಧ ರೀತಿಯ ಮಾನಸಿಕ ರೋಗಗಳೆಲ್ಲ (Psychlogical Director) ನಾನಾ ಬಗೆಯ ಅಧ್ಯಯನ ನಡೆಸಲು ವಿವಿಧ ವೈಜ್ಞಾನಿಕ Model ಬಳಸುತ್ತಿದ್ದಾರೆ.

ಅನಂತರ ಓಲ್ವಿಯ ವಿಲಿಯಮ್ಸ್ ಬಾರ್ಬರ್ ಅವರು North Western University, Shicago ದಲ್ಲಿ ಪಿ.ಹೆಚ್.ಡಿ ಂು ಅಭ್ಯರ್ಥಿಯಾಗಿದ್ದಾರೆ. ಅವರು ತಮ್ಮ ಸಂಶೋಧನೆ ಪ್ರಕಾರ ಮನೆಯಲ್ಲಿರುವ ಕ್ರಿಮಿ ಜಂತುಗಳ ಮೇಲೆ Spraying disinfetant ಮಾಡುವುದರಿಂದ Antibiotic Assistant Bacteria ಸಮಸ್ಯೆ ಉದ್ಭವವಾಗುತ್ತದೆ ಎಂದು ತಿಳಿಸಿದರು.

ಅನಂತರ ನಾಯಿಲ ರಜಾಕ್ ಸಾಹಿಬಾ ಅವರು Yale ವಿಶ್ವವಿದ್ಯಾನಿಲಯದಲ್ಲಿ Early medieramean Religions ನಲ್ಲಿ P.H.D. ಅಭ್ಯರ್ಥಿಯಾಗಿದ್ದಾರೆ. ಅವರು ಹೇಳಿದರು. ಇಸ್ಲಾಮ್ ಧರ್ಮದ ಪ್ರಾರಂಭದಲ್ಲಿ ಫೆಸಿಫಿಕ್ ಸಮುದ್ರದ ಕ್ಷೇತ್ರಗಳ ಅಧ್ಯಯನ ಮಾಡಲು Archology ಂು ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಬಹುದಾಗಿದೆ.

ಹುಝೂರ್ ಅನ್ವರ್(ಅಬಿಅ) ಅವರು ವಿಶೇಷವಾಗಿ ಆ ಸಂಶೋಧಕರಿಂದ ಅವರ ಕಾರ್ಯಗಳ ಫಲಿತಾಂಶದ ಬಗ್ಗೆ ಮತ್ತು ಸಮಾಜದ ಮೇಲೆ ಅದರಿಂದ ಆಗುವ ಪರಿಣಾಮಗಳ ಬಗ್ಗೆ ವಿಚಾರಿಸಿದರು.

ಕೊನೆಯಲ್ಲಿ ಸಂಘದವರು ಹುಝೂರೆ ಅನ್ವರ್ ಅವರಿಗೆ ಒಂದು ಆಸ್ಟ್ರೋ ಲ್ಯಾಬ್ ನೀಡಿದರು. ಅದು ಹಿಂದಿನ ಕಾಲಗಳಲ್ಲಿ ಖಗೋಳ ಮಾಪನಕ್ಕೆ ಬಳಸುತ್ತಿದ್ದ ಉಪಕರಣಗಳಾಗಿದ್ದವು. ಇದನ್ನು ಆರಂಭಿಕ ಮುಸ್ಲಿಂ ವಿಜ್ಞಾನಿಗಳು ಕಂಡುಹಿಡಿದಿದ್ದರು.

ಈ ಕಾರ್ಯಕ್ರಮವು ಬೆಳಿಗ್ಗೆ 8.05 ರವರೆಗೆ ಮುಂದುವರೆಯಿತು. ನಂತರ 8:30 ಕ್ಕೆ ಹುಝೂರೆ ಅನ್ವರ್ ಮಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳನ್ನು ಒಟ್ಟಿಗೆ ನಿರ್ವಹಿಸಿಕೊಟ್ಟರು ಪ್ರಾರ್ಥನೆಯ ನಂತರ ಹುಝೂರೆ ಅನ್ವರ್ (ಅಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು.

### 30 ಸೆಪ್ಟೆಂಬರ್ ಶುಕ್ರವಾರ

ಹುಝೂರ್ ಅನ್ವರ್(ಅಬಿಅ) ಮುಂಜಾನೆ 5:50 ಕ್ಕೆ ಮಸ್ಜಿದ್ ಫತಹ ಅಝೀಮ್ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್(ಅಬಿಅ) ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರೆ ಅನ್ವರ್ ಕಚೇರಿ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು.

ಇಂದು ಪವಿತ್ರ ಜುಮುಅ ದಿನವಾಗಿತ್ತು. ಇಂದಿನ ಈ ದಿವಸವು ಹಲವು ವಿಧದಲ್ಲಿ ಒಂದು ಐತಿಹಾಸಿಕ ದಿನವಾಗಿತ್ತು. ಅದು ಅಹ್ಮದಿಅತ್ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯುವುದು. ಇಂದು ಹುಝೂರೆ ಅನ್ವರ್ ಅವರ ಖುತುಬ ಜುಮುಅ ಅಲ್ಲದೇ ಡಾ॥ ಅಲೆಕ್ಸಂಡರ್ ಡೂಮಿಯ zion ನಗರದಲ್ಲಿ ಮಸ್ಜಿದ್ ಫತಿಹ ಅಝಿಮ್‌ನ ಉದ್ಘಾಟನೆ ಆಗಬೇಕಿತ್ತು. ಅದಲ್ಲದೆ ಇದು ಈ ನಾಡಿನಲ್ಲಿ ಖಲೀಫತುಲ್ ಮಸೀಹ್ ಒಬ್ಬರ MTA International ಮೂಲಕ ಇಡೀ ಲೋಕದಲ್ಲಿ ನೇರ ಪ್ರಸಾರವಾಗುವ ಪ್ರಥಮ ಕುತುಬ ಜುಮುಅ ಆಗಿತ್ತು.

ಇದಕ್ಕಿಂತ ಮುಂಚೆ ಅಮೇರಿಕಾದ ಪೂರ್ವಭಾಗ ವಾಷಿಂಗ್‌ಟನ್ D.C. Harrisbury ಮತ್ತು ದಕ್ಷಿಣ ಕ್ಷೇತ್ರದ ಹ್ಯೂಸ್ಟನ್ ಮತ್ತು ಪಶ್ಚಿಮ ಕ್ಷೇತ್ರದ ಲಾಸ್‌ಏಂಜಲೀಸ್ ಇಂದ ಹುಝೂರೆ ಅನ್ವರ್ ಅವರ ಜುಮುಅ ಕುತುಬಗಳು MTA ಮೇಲೆ ಪ್ರಸಾರಗೊಂಡಿದೆ.

ಡಾ॥ ಡೂಯಿ ಹೇಳಿದರು. ನಾನು ನಿರ್ಮಿಸಿದ zion ನಗರದಿಂದ ಇಸ್ಲಾಂ ಧರ್ಮದ ಧ್ವನಿಯನ್ನು ಅಡಗಿಸಿಬಿಡುವೆನು. ಇಸ್ಲಾಂ ಧರ್ಮದ ಹೆಸರು ಸಹ ಹೇಳುವವರು ಯಾರೂ ಇರಲಿಕ್ಕಿಲ್ಲ.

ಇಂದು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಖಲೀಫರ ನಾಲಿಗೆಯಿಂದ ದೇವವಾಣಿ (ಇಲ್‌ಹಾಮ್) ಫತಹ ಅಝೀಮ್ ನಿಂದ, ಕೇವಲ ಡೂಯಿ ನಗರದಲ್ಲಿ ಮಾತ್ರ ಇಸ್ಲಾಮಿನ ಧ್ವನಿ ಮೊಳಗುತ್ತಿಲ್ಲ. ಬದಲು ಇಲ್ಲಿಂದ ಡೂಯಿಯ ದೇಶ ಅಮೇರಿಕಾದಲ್ಲಿಯೂ ಈ ಧ್ವನಿ ಮೊಳಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಧ್ವನಿ ಇಲ್ಲಿಂದ ಪ್ರಪಂಚದಾದ್ಯಂತ, ಇಡೀ ಲೋಕದಲ್ಲಿ ದೇಶ ದೇಶಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ, ಮನೆ ಮನೆಗಳಲ್ಲಿ ಆಲಿಸಲಾಗುತ್ತಿದೆ.

ಹಾಗೆ ಇಂದು ಈ ನಗರದ ಎಲ್ಲ ಭಾಗಗಳಿಂದ ಮತ್ತು ಇಲ್ಲಿಯ ಹಗಲಿರುಳಿನ ಕ್ಷಣ ಕ್ಷಣವು ಸಹ ಹಝುರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ಸಾಕ್ಷ್ಯವನ್ನು ಹೇಳುತ್ತಿದೆ. "ಸುಜ್ಞಾನಲ್ಲ್ರಹ ಏ ಬಿಹಮ್ದಿಹಿ ಏ ಸುಬ್ಹಿನಲ್ಲಾಹಿಲ್ ಅಝೀಮ್."

ಜುಮುಅ ನಮಾಝಿನಲ್ಲಿ Zion ಜಮಾಅಅತ್ ಅಲ್ಲದೇ ಅಮೇರಿಕಾದ ವಿವಿಧ ಇತರ ಜಮಾಅತುಗಳಿಂದ ಜಮಾಅತ್ ಬಾಂಧವರು ಬಹು ದೂರ ದೂರದ ಪ್ರಯಾಣಗಳನ್ನು ಮಾಡಿ ಇಲ್ಲಿ ಭಾಗವಹಿಸಲು ಬಂದಿರುತ್ತಾರೆ. ಇಲ್ಲಿ ಬಂದು ಸೇರಿರುವವರಲ್ಲಿ ಬಹುದೊಡ್ಡ ಸಂಖ್ಯೆ ಒಂದು ಸಾವಿರದಿಂದ ಎರಡು ಸಾವಿರದ ಮೈಲುಗಳ ದೂರದ ಪ್ರವಾಸಮಾಡಿ ಬಂದವರಾಗಿದ್ದರು. ಜಮಾಅತ್ ನಮಾಝಿನಲ್ಲಿ ಭಾಗವಹಿಸಿದವರ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚಾಗಿತ್ತು.

ಅಮೇರಿಕಾ ಅಲ್ಲದೆ, ಯು.ಕೆ. ಜರ್ಮನಿ, ಸ್ವೀಡನ್, ಬ್ರಾಝೀಲ್, ಗಿಯಾನ, ಸುರೇನಾಮ್, ಪಾಕಿಸ್ತಾನ, ಕಬಾಬೀರ, ಕೆನಾಡ ಜಮಾಅತಿನ ಪ್ರತಿನಿಧಿಗಳು ಮತ್ತು ಇತರ ಬಾಂಧವರು ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು.

ಕಾರ್ಯಕ್ರಮದನ್ವಯ 1 ಗಂಟೆಗೆ ಹುಝೂರ್ ಅನ್ವರ್(ಅಬಿಅ) ಮಸ್ಜಿದ್ ಫತಹ ಅಝೀಮ್ ಆಗಮಿಸಿದ್ದರು ಮತ್ತು ಕುತುಬ ಜುಮುಅ ನೀಡಿದರು. (ಈ ಖುತುಬದ ಸಾರಾಂಶ, 6 ಅಕ್ಟೋಬರ್ 2022 ರ ಪ್ರಕಟಗೊಂಡಿದೆ ಅಖ್ಬಾರೆ ಬದರ್ ಸಂಚಿಕೆ ಸಂಖ್ಯೆ 40 ರಲ್ಲಿ ಅದರ ಸಂಪೂರ್ಣ ಭಾಗ ಅದೇ ಸಂಚಿಕೆಯಲ್ಲಿ ಪರಿಶೀಲಿಸಬಹುದು.)

ಹುಝೂರ್ ಅನ್ವರ್(ಅಬಿಅ) ಅವರು ಈ ಕುತುಬ ಜುಮುಅ 1:50 ಗಂಟೆಯವರೆಗೆ ಜಾರಿಯಲ್ಲಿತ್ತು. ನಂತರ ಹುಝೂರೆ ಅನ್ವರ್ ಜುಮುಅ ನಮಾಝ್‌ನೊಂದಿಗೆ ಅಸರ್ ನಮಾಝ್ ಒಟ್ಟುಗೂಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**Love for All, Hatred for None**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.